ಸಂಪುಟ : 8 ಸಂಚಿಕೆ : 204 ಪುಟ : 4 ಬೆಲೆ : 3.00 ರವಿವಾರ ಸೆಪ್ಟೆಂಬರ್ 17, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 204 Pages : 4 Price : 3.00 Sunday September 17, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಸೆಪ್ಟೆಂಬರ್ 17 ರಂದು ರವಿವಾರ ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಬಸವಣ್ಣಯ್ಯಶಾಸ್ತ್ರೀ ಬಸವನಕಟ್ಟಿ ರವರಿಂದ "ಸುಗಮ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಶ್ರೀಮತಿ ಕೌಶಲ್ಯಾಬಾಯಿ ಬದಿ ಇವರಿಂದ "ಸುಗಮ ಸಂಗೀತ" ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಬಸವರಾಜ ಹಡಗಲಿ ಇವರಿಂದ "ಜಾನಪದ ಸಂಗೀತ" ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈತ ಬಾಂಧವರ ಗಮನಕ್ಕೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಕೃಷಿ, ತೋಟಗಾರಿಕೆ, ಕಂದಾಯ, ರೇಷ್ಮೆ ಹಾಗೂ ಇತರೆ ಸಂಬಂಧಿತ ಇಲಾಖೆಗಳಿಂದ ವಿವಿಧ ಸವಲತ್ತು ಪಡೆಯಲು ಹಾಗೂ ಬೆಳೆ ಸಾಲ ಪಡೆಯಲು ರೈತ ಬಾಂಧವರು ಎಫ್.ಐ.ಡಿ. ಅನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ರೈತ ಬಾಂಧವರು https://fruitspmk.karnataka.gov.in/MIReport/GetDetai lsByAadhaar.aspx ಲಿಂಕ್‌ನ್ನು ಬಳಸಿಕೊಂಡು ಆಧಾರ ನಂಬರ ನಮೂದಿಸಿ ತಮ್ಮ ಹೆಸರಿನಲ್ಲಿ ಎಫ್.ಐ.ಡಿ.. ಅನ್ನು ಸೃಜಿಸಲಾಗಿದೆಯೋ ಅಥವಾ ಇಲ್ಲವೋ ಎಂಬುವುದನ್ನು ತಿಳಿದುಕೊಳ್ಳಬಹುದು. ಒಂದು ವೇಳೆ ಎಫ್.ಐ.ಡಿ.. ರಚನೆಯಾಗದಿದ್ದಲ್ಲಿ ಆಧಾರ, ಪಹಣಿ, ಬ್ಯಾಂಕ್ ಪಾಸ್‌ಬುಕ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಪ.ಜಾ & ಪ.ಪಂ), ಇತ್ತೀಚಿನ ಭಾವಚಿತ್ರ ಹಾಗೂ ಇತರೆ ದಾಖಲಾತಿಗಳೊಂದಿಗೆ ತಮ್ಮ ತಾಲೂಕು / ಹೋಬಳಿ ವ್ಯಾಪ್ತಿಯ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಎಫ್.ಐ.ಡಿ. ಅನ್ನು ಸೃಜಿಸಿಕೊಳ್ಳಲು ಕೋರಲಾಗಿದೆ. ಒಂದು ವೇಳೆ ಎಫ್.ಐ.ಡಿ. ರಚನೆಯಾಗಿ ಕೆಲವೊಂದು ಖಾತಾ ಸಂಖ್ಯೆಗಳು ಎಫ್. ಐ.ಡಿ. ಅಲ್ಲಿ ಸೇರ್ಪಡೆಯಾಗದಿದ್ದಲ್ಲಿ ಸಂಬಂಧಿಸಿದ ದಾಖಲೆಗಳನ್ನು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಸರಿಪಡಿಸಿಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರಾದ ತಾರಾಮಣಿ ಜಿ. ಹೆಚ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತರಬೇತಿಗೆ ಅಲ್ಪಸಂಖ್ಯಾತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

2023–24ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಕರ್ನಾಟಕ ಹಜ್ ಭವನ ಇಲ್ಲಿ ಐಎಎಸ್/ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿದೆ. ತರಬೇತಿಗೆ ಅರ್ಹ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ, ಪರ್ಶಿಯನ್) ವಿದ್ಯಾರ್ಥಿಗಳು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 25 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಗದಗ ಜಿಲ್ಲಾ ನ್ಯಾಯಾಲಯದ ಎದುರುಗಡೆ, ಗದಗ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

### ಪ್ರಧಾನಿ ನರೇಂದ್ರ ಮೋದಿ ಜನ್ಮ ದಿನಾಚರಣೆ ಹಿನ್ನೆಲೆ

## ಇಂದಿನಿಂದ ಅ.2ರವರೆಗೆ ಸೇವಾ ಪಾಕ್ಷಿಕ




**■ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನಾಚರಣೆ ನಿಮಿತ್ತ ಸೆ.17 ರಿಂದ ಅ.2 ರವರೆಗೆ ಜಿಲ್ಲೆಯಲ್ಲೂ 'ಸೇವಾ ಪಾಕ್ಷಿಕ' ಆಚರಿಸುತ್ತಿದ್ದು, ಈ ಅವಧಿಯಲ್ಲಿ ಒಟ್ಟು ನಾಲ್ಕು ಹಂತದಲ್ಲಿ ಆರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಹೇಳಿದರು.

ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆಪ್ಟೆಂಬರ್ 17 ರಿಂದ 24 ರವರೆಗೆ 'ಆಯುಷ್ಮಾನ್ ಭವ' ಸಪ್ತಾಹದಲ್ಲಿ ಯುವ ಮೋರ್ಚಾ ವತಿಯಿಂದ ಜಿಲ್ಲೆ ಮತ್ತು ಮಂಡಲದಲ್ಲಿ ರಕ್ತದಾನ ಶಿಬಿರ ನಡೆಯಲಿದೆ. ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಕಾರ್ಡ್‌ಗಳನ್ನು ನೋಂದಣಿ ಮಾಡಿಸುವುದು, ಜಿಲ್ಲಾ ಮತ್ತು ಮಂಡಲಗಳಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜನೆ ಮಾಡಲಾಗುತ್ತದೆ.

ಸೆಪ್ಟೆಂಬರ್ 25 ರಂದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯರವರ ಜನ್ಮಜಯಂತಿಯನ್ನು ಜಿಲ್ಲೆಯ 956 ಬೂತ್ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪ್ರತಿ ಬೂತ್‌ನಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ, ಅವರ ವ್ಯಕ್ತಿತ್ವ, ಕೊಡುಗೆ ವಿಚಾರಧಾರೆಗಳ ಮಾಹಿತಿ ಕಾರ್ಯಕ್ರಮ ನಡೆಯಲಿದೆ.

ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 1 ರವರೆಗೆ ಎರಡನೇ ಹಂತದ ಬೂತ್ ಸಬಲೀಕರಣ (ಸಶಕ್ತೀಕರಣ) ಕಾರ್ಯಕ್ರಮ, ವಿಶೇಷ ಸಂಪರ್ಕ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ ಆಯಾ ಪ್ರದೇಶದ ಜನವಸತಿ ಪ್ರದೇಶ/ಕೊಳಗೇರಿಗಳನ್ನು ಸಂಪರ್ಕಿಸಲಿದ್ದಾರೆ.

ಅಕ್ಟೋಬರ್ 2 ರಂದು ಸಾರ್ವಜನಿಕ ಸ್ಥಳಗಳಲ್ಲಿ "ನನ್ನ ಮಣ್ಣು ನನ್ನ ದೇಶ' ಕಾರ್ಯಕ್ರಮ ಅಡಿ ವಿಶೇಷ ಸ್ವಚ್ಛತಾ ಅಭಿಯಾನ ನಡೆಯಲಿದೆ ಎಂದು ಸಂಕನೂರ ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ಗದಗ ಶಹರ ಬಿಜೆಪಿ ಅಧ್ಯಕ್ಷ ಅನಿಲ ಅಬ್ಬಿಗೇರಿ, ಸೇವಾ ಪಾಕ್ಷಿಕದ ಗದಗ ಜಿಲ್ಲಾ ಸಂಚಾಲಕ ಮಂಜುನಾಥ ಮೆಣಸಗಿ ಇದ್ದರು.

### ಪದವಿಪೂರ್ವ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಸಚಿವ ಎಚ್.ಕೆ.ಪಾಟೀಲ ಚಾಲನೆ

# ವಿದ್ಯಾರ್ಥಿ ಜೀವನದಿಂದಲೇ ದೈಹಿಕ ಚಟುವಟಿಕೆ ಅಳವಡಿಸಿಕೊಳ್ಳಿ





**■ವಿಜಯಸಾಕ್ಷಿ ಸುದ್ದಿ, ಗದಗ**

ಮಕ್ಕಳು ಶೈಕ್ಷಣಿಕ ಜೀವನದ ವಿದ್ಯಾರ್ಥಿ ಹಂತದಿಂದಲೇ ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ಆರೋಗ್ಯಯುತ ಜೀವನ ಸಾಗಿಸಬೇಕು ಎಂದು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕರೆ ನೀಡಿದರು.

ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಆಯೋಜಿಸಲಾದ ಪದವಿ ಪೂರ್ವ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಕ್ರೀಡಾ ಧ್ವಜಾರೋಹಣ ಹಾಗೂ ಕ್ರೀಡಾ ಜ್ಯೋತಿ ನೀಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳಲ್ಲಿ ಸೋಲು ಗೆಲುವಿಗೆ ಮಹತ್ವ ನೀಡದೆ ಚಟುವಟಿಕೆ ಹಾಗೂ ಹುಮ್ಮಸ್ಸಿನಿಂದ ಭಾಗವಹಿಸುವಿಕೆ ಮುಖ್ಯ. ನಿಮ್ಮ ಇಂದಿನ ಕ್ರೀಡಾ ಚಟುವಟಿಕೆ ಭಾಗವಹಿಸುವಿಕೆಯು ಮುಂದಿನ ಜೀವನದಲ್ಲಿ ನೆನಪಿನಂಗಳದಲ್ಲಿ ಉಳಿಯುವಂತೆ ಆಗಬೇಕು ಎಂದರು.

ದೈಹಿಕ ಚಟುವಟಿಕೆಗಳು ಶಿಕ್ಷಣ ವ್ಯವಸ್ಥೆಯಲ್ಲಿ ಕಡೆಗಣನೆಯಾದಾಗ ಸಮಾಜದಲ್ಲಿ ಜಿಮ್ ಹಾಗೂ ವ್ಯಾಯಾಮ ತರಬೇತಿ ಸಂಸ್ಥೆಗಳು ಉಗಮವಾಗಿವೆ. ಜೀವನವು ಸಂಪೂರ್ಣವಾಗಿ ಚಟುವಟಿಕೆಯಿಂದ ಕೂಡಿರಲು ದೈಹಿಕ ಕ್ರೀಡಾ ಚಟುವಟಿಕೆ ಮುಖ್ಯವಾಗಿದೆ ಎಂದರು.

ಪದವಿ ಪೂರ್ವ ಹಂತದಲ್ಲಿ ಮಕ್ಕಳು ತಮ್ಮ ಜೀವನದ ನಿರ್ಣಾಯಕ ಹಂತವಾಗಿರುವುದರಿಂದ ಹೆಚ್ಚಾಗಿ ಶೈಕ್ಷಣಿಕ ವಿದ್ಯಾಭ್ಯಾಸದಲ್ಲಿ ಅಂಕಗಳ ಗಳಿಸುವಿಕೆಯಲ್ಲಿ ಗಮನ ಹರಿಸುತ್ತಾರೆ. ಇದರಿಂದಾಗಿ ಮಕ್ಕಳು ಮಾನಸಿಕ ಹಾಗೂ ದೈಹಿಕವಾಗಿ ಅಶಕ್ತರಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಶೈಕ್ಷಣಿಕ ಪ್ರಗತಿಯೊಂದಿಗೆ ದೈಹಿಕ ಕ್ರೀಡಾ ಚಟುವಟಿಕೆಗಳಲ್ಲಿಯೂ ಸಹ ತಮ್ಮನ್ನು ತಾವು ತೊಡಗಿಸಿಕೊಂಡು ಜೀವನವನ್ನು ಕ್ರಿಯಾಶೀಲತೆಯಿಂದ ಕೂಡಿರುವಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸರ್ಕಾರಿ ಹಾಗೂ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ಕೊರತೆ ಅಧಿಕವಾಗಿರುವ ಕುರಿತು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರು ಮಾತನಾಡಿದ್ದು ಈ ವಿಷಯವನ್ನು ಗಂಭೀರವಾಗಿ ವಿಧಾನಸಭೆಯಲ್ಲಿ ಚರ್ಚಿಸುವ ಮೂಲಕ ಪಕ್ಷಾತೀತವಾಗಿ ದೈಹಿಕ ಶಿಕ್ಷಕರ ನೇಮಕಾತಿ ಕುರಿತು ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಪಂಜಾಬ ಹರಿಯಾಣ ರಾಜ್ಯಗಳಲ್ಲಿನ ಮಕ್ಕಳು ಹಾಗೂ ವಯಸ್ಕರು ದೈಹಿಕವಾಗಿ ಹೆಚ್ಚು ಸದೃಢರಾಗಿರುತ್ತಾರೆ. ಹಾಗೂ ಸಾಕಷ್ಟು ಚಟುವಟಿಕೆಯಿಂದ ಕೂಡಿರುತ್ತಾರೆ. ಇದಕ್ಕೆ ಕಾರಣ ಅಲ್ಲಿನ ಆಹಾರ ವ್ಯವಸ್ಥೆ ಹಾಗೂ ಕ್ರೀಡಾ ಸ್ಫೂರ್ತಿ, ದೈಹಿಕ ಕ್ರಿಯಾಶೀಲತೆ ಕಾರಣವಾಗಿದೆ. ಅದರಂತೆ ಮೂಲಭೂತ ಶಿಕ್ಷಣಕ್ಕೆ ನಾವೆಲ್ಲರೂ ಹೆಚ್ಚು ಒತ್ತು ನೀಡುವ ಮೂಲಕ ಕ್ರಿಯಾಶೀಲವಾಗಿಸಬೇಕಿದೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, ರಾಜ್ಯದಲ್ಲಿ 1102 ಸರ್ಕಾರಿ ಹಾಗೂ 1015 ಅನುದಾನಿತ ಪದವಿ ಪೂರ್ವ ಕಾಲೇಜುಗಳಿದ್ದು ▸▸3ನೇ ಪುಟಕ್ಕೆ

### ಗೌರಿ ಗಣೇಶ ಚತುರ್ಥಿ ಹಬ್ಬದ ಹಿನ್ನೆಲೆಯಲ್ಲಿ ಪರಿಸರ ಮಾಲಿನ್ಯ ತಡೆಗಟ್ಟಲು ಮಾರ್ಗಸೂಚಿಗಳು

# ಕಾನೂನು ಸುವ್ಯವಸ್ಥೆ ಕಾಪಾಡಿ: ಡಿಸಿ ಸೂಚನೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಗಣೇಶ ಹಬ್ಬದ ಸಂದರ್ಭದಲ್ಲಿ ಜಲಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪಿ.ಓ.ಪಿ ಯಿಂದ ಮಾಡುವ ವಿಗ್ರಹಗಳನ್ನು ಯಾವುದೇ ಜಲಮೂಲಗಳಿಗೆ ವಿಸರ್ಜನೆ ಮಾಡುವುದನ್ನು ನಿರ್ಬಂಧಿಸಿದೆ. ಹಬ್ಬದ ಸಂದರ್ಭದಲ್ಲಿ ಶಬ್ದ ಮಾಲಿನ್ಯ, ಜಲಮಾಲಿನ್ಯ ಸೇರಿದಂತೆ ಒಟ್ಟಾರೆಯಾಗಿ ಪರಿಸರ ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪಿ.ಓ.ಪಿ ಹಾಗೂ ಬಣ್ಣ ಲೇಪಿತ ಗಣೇಶ ಮೂರ್ತಿಗಳನ್ನು ತಯಾರಿಸುವುದು, ಮಾರಾಟ ಮಾಡುವುದನ್ನು ಹಾಗೂ ಪ್ರತಿಷ್ಠಾಪಿಸುವುದನ್ನು ನಿರ್ಬಂಧಿಸಿದ್ದು, ಪರಿಸರ ಮಾಲಿನ್ಯಕ್ಕೆ ಅವಕಾಶ ಮಾಡಿಕೊಡದಂತೆ ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆ ಮಾಡಲು ಮಾರ್ಗಸೂಚಿಗಳನ್ನು ನಿಗದಿಪಡಿಸಿ ನಿರ್ದೇಶನ ನೀಡಲಾಗಿದೆ.

ಸೆಪ್ಟೆಂಬರ್ 19 ರಿಂದ ಗೌರಿ–ಗಣೇಶ ಹಬ್ಬವನ್ನು ರಾಜ್ಯದಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತದೆ, ಈ ಹಬ್ಬದ ಹಿನ್ನೆಲೆಯಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವ ಪ್ರಕ್ರಿಯೆ ಸಾಮಾನ್ಯವಾಗಿದ್ದು, ಈ ನಿಟ್ಟಿನಲ್ಲಿ ಗಣೇಶ ಪ್ರತಿಷ್ಠಾಪನೆಗೆ ಅಗತ್ಯವಿರುವ ಸ್ಥಳ, ಪೆಂಡಾಲ್, ವಿದ್ಯುತ್ ಸಂಪರ್ಕ ಇನ್ನು ಮುಂತಾದ ಪರವಾನಿಗೆ ನೀಡಲು ಕಂದಾಯ, ಸಾರಿಗೆ, ಲೋಕೋಪಯೋಗಿ, ಇಂಧನ, ಅಗ್ನಿಶಾಮಕ ಮತ್ತು ಪೊಲೀಸ್ ಇಲಾಖೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಂಯೋಜಿಕವಾಗಿ ಕರ್ತವ್ಯ ನಿರ್ವಹಿಸಿ ಜಿಲ್ಲೆಯಾದ್ಯಂತ ಕಾನೂನು ಸುವ್ಯಸ್ಥೆ ಕಾಪಾಡತಕ್ಕದ್ದು.

ಪಿ.ಓ.ಪಿ.ವಿಗ್ರಹಗಳ ತಯಾರಿಕೆ, ಮಾರಾಟ ಮತ್ತು ಕೆರೆ–ನದಿಗಳಲ್ಲಿ ವಿಸರ್ಜನೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸಂಬಂಧಪಟ್ಟ ಇಲಾಖೆಗಳು ಸಮನ್ವಯ ಸಾಧಿಸಿ ಗಣೇಶ ಹಬ್ಬದ ಸಂದರ್ಭದಲ್ಲಿ ಶಬ್ದ ಮಾಲಿನ್ಯ, ಜಲ ಮಾಲಿನ್ಯ ಸೇರಿದಂತೆ ಒಟ್ಟಾರೆಯಾಗಿ ಪರಿಸರ ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟಲು ಜಿಲ್ಲಾದ್ಯಂತ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಪರಿಸರ ಅಧಿಕಾರಿ ಸದಸ್ಯ ಕಾರ್ಯದರ್ಶಿ ಗಳಾಗಿರುತ್ತಾರೆ. ಸಮಿತಿಯ ▸▸3ನೇ ಪುಟಕ್ಕೆ

ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳು ಅಧ್ಯಕ್ಷರಾಗಿದ್ದು, ಉಪವಿಭಾಗಾದಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ, ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ವಾಣಿಜ್ಯ ತೆರಿಗೆ ಅಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸದಸ್ಯರುಗಳಾಗಿರುತ್ತಾರೆ.

ತಾಲೂಕು ಮಟ್ಟದ ಸಮಿತಿಯಲ್ಲಿ ಗದಗ/ನರಗುಂದ ಆರಕ್ಷಕ ಉಪ ಅಧೀಕ್ಷಕರು ಅಧ್ಯಕ್ಷರಾಗಿದ್ದು, ಆಯಾ ತಾಲೂಕಿನ ತಹಸೀಲ್ದಾರರು, ಸಂಬಂಧಪಟ್ಟ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು, ತಾ.ಪಂ. ಕಾರ್ಯನಿರ್ವಹಣಾದಿಕಾರಿಗಳು, ಹೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪುರಸಭೆಯ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿಗಳು, ಕ್ಷೇತ್ರ ಶಿಕ್ಷಣಾದಿಕಾರಿಗಳು ಸದಸ್ಯರಾಗಿರುತ್ತಾರೆ.

## ಕಸ ವಿಲೇವಾರಿ ವಾಹನಗಳಿಗೆ ಸಚಿವ ಪಾಟೀಲ ಚಾಲನೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ನಗರಸಭೆಯ ವಿವಿಧ ಯೋಜನೆಗಳಡಿ ಖರೀದಿಸಲಾದ 14 ಕಸ ವಿಲೇವಾರಿ ಹೊಸ ವಾಹನಗಳಿಗೆ ಹಸಿರು ನಿಶಾನೆ ತೋರುವ ಮೂಲಕ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಶನಿವಾರದಂದು ಚಾಲನೆ ನೀಡಿದರು. ನಂತರ ಮಾತನಾಡಿದ ಸಚಿವ ಎಚ್.ಕೆ.ಪಾಟೀಲ, 1.82 ಕೋಟಿ ರೂ. ವೆಚ್ಚದಲ್ಲಿ ವಿವಿಧ ಹಂತದ 14 ವಾಹನಗಳನ್ನು ಖರೀದಿಸಿ ನಗರದ ಸ್ವಚ್ಛತೆಗಾಗಿ ನಗರಸಭೆಯಿಂದ ನೀಡಲಾಗಿದೆ. 6 ಮಿನಿ ಟಿಪ್ಪರ್, 3 ಟ್ರ್ಯಾಕ್ಟರ್, 2 ಡಿ ಶಿಲ್ಟಿಂಗ್ ಮಷಿನ್ ವಾಹನಗಳು, ಸ್ಕಿಡ್ ಸ್ಟೇರ್ ಲೋಡರ್ ವಾಹನ, ಫ್ರಂಟ್ ಆಂಡ್ ಬ್ಯಾಕ್ ಲೋಡರ್ ವಾಹನ, ಮಿನಿ ಎಕ್ಸಾಲೇಟರ್ ತಲಾ ಒಂದು ವಾಹನಗಳಗೆ ಚಾಲನೆ ನೀಡಲಾಗಿದೆ. ಈ ಬಂಡವಾಳ ತೊಡಗಿಸುವಿಕೆ ಮೂಲಕ ಗದಗ ನಗರ ಸ್ವಚ್ಛತೆಗೆ ನಗರಸಭೆ ಮುಂದಾಗಿದೆ. ಈ ಕಸ ವಿಲೇವಾರಿ ವಾಹನಗಳ ಸದ್ಬಳಕೆಯಾಗುವಂತೆ ಅಧಿಕಾರಿಗಳು ನಿಗಾ ವಹಿಸಬೇಕು. ನಗರದ ಸ್ವಚ್ಛತೆಗೆ ಒತ್ತು ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ವಿರೋಧ ಪಕ್ಷದ ನಾಯಕ ಎಲ್.ಡಿ. ಚಂದಾವರಿ, ಬಿ.ಬಿ.ಅಸೂಟಿ, ಕೃಷ್ಣ ಪರಾಪುರ, ಪೌರಾಯುಕ್ತ ಗಂಗಪ್ಪ ಎಂ, ಸೇರಿದಂತೆ ನಗರಸಭೆ ಸರ್ವ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.



### ಸ್ವಚ್ಛತೆಯೇ ಸೇವೆಯಲ್ಲಿ ಉತ್ತಮ ಯಶಸ್ಸಿಗೆ ಸಹಕರಿಸಲು ಜಿಲ್ಲಾಧಿಕಾರಿ ಕರೆ

## ಸ್ವಚ್ಛತಾ ಹೀ ಸೇವಾ ಆಂದೋಲನ



**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಎಲ್ಲಾ 122 ಗ್ರಾಮ ಪಂಚಾಯಿತಿಗಳು ಹಾಗೂ ಎಲ್ಲ ಗ್ರಾಮಗಳಲ್ಲಿ 'ಸ್ವಚ್ಛತಾ ಹಿ ಸೇವಾ' ಸ್ವಚ್ಛತೆಯೇ ಸೇವೆ ಎಂಬ ವಿಶೇಷ ಜನಾಂದೋಲನವನ್ನು ಸೆ.15ರಿಂದ ಅ.2ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹ ಣಾಧಿಕಾರಿಗಳಾದ ವೈಶಾಲಿ ಎಂ.ಎಲ್ ಅವರು ತಿಳಿಸಿದ್ದಾರೆ.

ಅಕ್ಟೋಬರ್ 2ರಂದು ಮಹಾತ್ಮ ಗಾಂಧೀಜಿಯವರ ಜನ್ಮದಿನದ ಸ್ಮರಣಾರ್ಥವಾಗಿ ಸ್ವಚ್ಛ ಭಾರತ ದಿನವನ್ನಾಗಿ ಆಚರಿಸಲಾಗುತ್ತಿದೆ. ಮಹಾತ್ಮರ ಧ್ಯೇಯ ವಾಕ್ಯ 'ಸ್ವಚ್ಛತೆಯೇ ದೈವತ್ವ' ಎಂಬ ಕನಸನ್ನು ನನಸಾಗಿಸಲು ಸೆ.15ರಿಂದ ಅ.2ರವರೆಗೆ 15 ದಿನಗಳ ಕಾಲ ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷ ಆಂದೋಲನವನ್ನು ಹಮ್ಮಿಕೊಳ್ಳಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ತೀರ್ಮಾನಿಸಲಾಗಿದೆ. ಈ ವರ್ಷದ ಸ್ವಚ್ಛತಾ ಹಿ ಸೇವಾ, ಸ್ವಚ್ಛತೆಯೇ ಸೇವೆ ಎಂಬ ವಿಶೇಷ ಆಂದೋಲನದ ಘೋಷವಾಕ್ಯವಾಗಿ 'ಕಸ ಮುಕ್ತ, ತ್ಯಾಜ್ಯ ಮುಕ್ತ ಭಾರತ' ಎಂದು ಘೋಷಿಸಲಾಗಿದ್ದು, ಎಲ್ಲೆಡೆ ಸದೃಶ್ಯ ಸ್ವಚ್ಛತೆ ಸಾಧಿಸಿ ಸ್ವಚ್ಛ ಸುಂದರ, ಸಧೃಢ ಗ್ರಾಮಗಳನ್ನು ರೂಪಿಸುವ ಮಹತ್ವಾಕಾಂಕ್ಷೆಯನ್ನು ಹೊಂದಲಾಗಿದೆ.

ಸ್ವಚ್ಛತಾ ಹಿ ಸೇವಾ, ಸ್ವಚ್ಛತೆಯೇ ಸೇವೆ, ಸಫಾಯಿ ಮಿತ್ರ ಸುರಕ್ಷ ಶಿಬಿರ ಈ ನಿಟ್ಟಿನಲ್ಲಿ ಎಲ್ಲಾ ಸಂಬಂಧಿತ ಪಾಲುದಾರರೊಂದಿಗೆ ತಮ್ಮ ಹಂತದಲ್ಲಿ ಸಭೆಯನ್ನು ವಿವಿಧ ಚಟುವಟಿಕೆಗಳ ಬಗ್ಗೆ ವಿವರವಾದ ಮಾಹಿತಿ ತಿಳಿಸಿ ಮತ್ತು ಸ್ವಚ್ಛತಾ ಹಿ ಸೇವಾ, ಸ್ವಚ್ಛತೆಯೇ ಸೇವೆಯಲ್ಲಿ ಉತ್ತಮ ಯಶಸ್ಸು ಗಳಿಸುವ ಉದ್ದೇಶದಿಂದ ಸದೃಢ ಭಾರತ ನಿರ್ಮಾಣಕ್ಕೆ ಗ್ರಾಮ, ಗ್ರಾಮ ಪಂಚಾಯಿತಿ, ತಾಲೂಕು ಹಾಗೂ ಜಿಲ್ಲೆಯ ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷಗಳಂತೆಯೇ ಗ್ರಾಮಗಳ ಸ್ವಚ್ಛತೆಗೆ ಸ್ವಯಂಪ್ರೇರಿತರಾಗಿ ಚಟುವಟಿಕೆಗಳಲ್ಲಿ ಭಾಗವಹಿಸುವುದು. ಜಿಲ್ಲೆಯ ತಾಲೂಕು, ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹೆಚ್ಚು ಜನಜಂಗುಳಿಯಿರುವ ಸ್ಥಳಗಳಾದ ಬಸ್ ನಿಲ್ದಾಣ, ರೈಲು ನಿಲ್ದಾಣ, ಸಮುದಾಯ ಭವನ, ಪ್ರವಾಸಿ ತಾಣಗಳು, ಐತಿಹಾಸಿಕ ಸ್ಮಾರಕಗಳು, ಚರಂಡಿಗಳು ಮತ್ತು ನಾಲಾಗಳು, ಸಾರ್ವಜನಿಕ ಸ್ಥಳಗಳಾದ ಶಾಲೆ, ಅಂಗನವಾಡಿ, ಗ್ರಂಥಾಲಯ, ದೇವಸ್ಥಾನ ಮುಂತಾದ ಸ್ಥಳಗಳಲ್ಲಿ ಸ್ವಚ್ಛತೆಯ ಕುರಿತು ಜಾಗೃತಿ ಮತ್ತು ದೃಶ್ಯ ಸ್ವಚ್ಛತೆ ಕಾಯ್ದುಕೊಳ್ಳಲು ಶ್ರಮದಾನ ಮತ್ತು ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗುವುದು.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ತೋಟಗಾರಿಕೆ ಇಲಾಖೆ ವತಿಯಿಂದ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ, ತೋಟಗಾರಿಕೆ ಬೆಳೆಗಾರರಿಗೆ ಹನಿ ನೀರಾವರಿ ಘಟಕ ಅಳವಡಿಕೆಗೆ ಸಹಾಯಧನ ನೀಡುವ ಕಾರ್ಯಕ್ರಮವಿದ್ದು, ರೈತರು ಇದರ ಸದುಪಯೋಗ ಪಡೆಯಬಹುದು.

ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದ ಅಡಿಯಲ್ಲಿ ತೋಟಗಾರಿಕೆ ಇಲಾಖೆಯ ಮುಖಾಂತರ, ತೋಟಗಾರಿಕೆ ಬೆಳೆಗಳಾದ, ಹಣ್ಣು ತರಕಾರಿ, ಹೂವು, ಪ್ಲ್ಯಾಂಟೇಶನ್ ಬೆಳೆಗಳು, ಔಷಧಿ & ಸುಗಂಧ ಸಸ್ಯಗಳು ಹಾಗೂ ಸಾಂಬಾರು ಬೆಳೆಗಳಿಗೆ ರೈತರು ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಲು ಶಿರಹಟ್ಟಿ ತಾಲೂಕಿನ ತೋಟಗಾರಿಕೆ ಇಲಾಖೆಗೆ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ರೈತರು ತೋಟಗಾರಿಕೆ ಇಲಾಖೆ ವತಿಯಿಂದ ಅನುಮೋದನೆಗೊಂಡ ಕಂಪನಿ ಅಥವಾ ಡೀಲರ್ ಅವರಿಂದ, ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಬಹುದು.

ಆಸಕ್ತ ರೈತರು ಅರ್ಜಿಯೊಂದಿಗೆ ಫೋಟೋ, ಉತಾರಾ, ಖಾತೆ ಉತಾರಾ, ಬೆಳೆ ದೃಢೀಕರಣ ಪತ್ರ, ಮಣ್ಣು & ನೀರಿನ ಪರೀಕ್ಷೆ, 20/-ರೂಪಾಯಿ ಛಾಪಾ ಕಾಗದದಲ್ಲಿ ದೃಢೀಕರಣ ಪತ್ರದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹೊಸದಾಗಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸುವ ರೈತರು, ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡರೆ, ನೀರಿನ ಉಳಿತಾಯ, ಕಳೆ ನಿಯಂತ್ರಣ, ಕಡಿಮೆ ನಿರ್ವಹಣೆ ಅಧಿಕ ಇಳುವರಿ, ಹೆಚ್ಚು ಲಾಭ ಪಡೆಯಲು ಸಾಧ್ಯವಾಗುವುದು.

ಈಗಾಗಲೇ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಸಹಾಯಧನ ಪಡೆದುಕೊಂಡಲ್ಲಿ, ಅದೇ ಕ್ಷೇತ್ರಕ್ಕೆ ಸಹಾಯಧನ ನೀಡಲು ಅವಕಾಶವಿರುವುದಿಲ್ಲ.

ಆಸಕ್ತ ರೈತರು ಕೊಳವೆಬಾವಿ ಹೊಂದಿದ್ದು, ಮಣ್ಣು & ನೀರಿನ ಪರೀಕ್ಷೆ ಮಾಡಿಸಿಕೊಂಡು ಸೆಪ್ಟೆಂಬರ್ 30 ರೊಳಗಾಗಿ ಅರ್ಜಿ ಸಲ್ಲಿಸಲು ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕಿನ ರೈತರಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸುರೇಶ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆಪ್ಟೆಂಬರ್ 17-ವಿಶ್ವಕರ್ಮ ಜಯಂತಿ, ತನ್ನಿಮಿತ್ತ ವಿಶೇಷ ಲೇಖನ

# ಸರ್ವಲೋಕಗಳ ನಿರ್ಮಾತೃ ವಿಶ್ವಕರ್ಮ



ಭಾರತವು ಅನೇಕ ರೀತಿಯ ಹಬ್ಬಗಳ ಆಚರಣೆ ಮಾಡುವ ತವರೂರು. ಇಲ್ಲಿ ವಿವಿಧ ಸಂಸ್ಕೃತಿಗಳ ಸಂಗಮವಿದೆ. ಬಹು ಸಾಂಸ್ಕೃತಿಕ ಮತ್ತು ಬಹು ಧಾರ್ಮಿಕ ಬೀಡಾಗಿರುವ ಭಾರತ ವಿವಿಧ ಧರ್ಮಗಳ ಹಬ್ಬಗಳನ್ನಾಚರಿಸುತ್ತದೆ. ಈ ಹಬ್ಬಗಳು ಭಾರತೀಯರ ಜೀವನದಲ್ಲಿ ವಿಶೇಷ ಸ್ಥಾನವನ್ನು ಹೊಂದಿವೆ. ಇವುಗಳಲ್ಲಿ ಒಂದು ವಿಶ್ವಕರ್ಮ ಜಯಂತಿ. ಹಿಂದೂ ವಾಸ್ತುಶಿಲ್ಪದ ದೇವರಾದ ವಿಶ್ವಕರ್ಮನಿಗೆ ಗೌರವ ಸಲ್ಲಿಸಲು ಪ್ರತಿವರ್ಷ ಸೆಪ್ಟೆಂಬರ್ 17ರಂದು ವಿಶ್ವಕರ್ಮ ಜಯಂತಿಯನ್ನು ಆಚರಿಸಲಾಗುತ್ತದೆ.

ಭಗವಾನ್ ವಿಶ್ವಕರ್ಮನನ್ನು ದೇವತೆಗಳ ವಾಸ್ತುಶಿಲ್ಪಿ ಎನ್ನಲಾಗುತ್ತದೆ. ಆದ್ದರಿಂದ, ಅವರನ್ನು 'ಕರಕುಶಲತೆಯ ದೇವರು' ಎಂದೂ ಕರೆಯಲಾಗುತ್ತದೆ. ಅವನ ತಂದೆ ಹೆಸರು ವಾಸ್ತು, ಅವನು ಧರ್ಮದ ಏಳನೇ ಮಗು. ತಾಂತ್ರಿಕ ಪ್ರಪಂಚದ ಭಗವಾನ್ ವಿಶ್ವಕರ್ಮನ ಹಬ್ಬವನ್ನು ಪ್ರತಿವರ್ಷ ಕನ್ಯಾ ಸಂಕ್ರಾಂತಿಯ ದಿನದಂದು ಆಚರಿಸಲಾಗುತ್ತದೆ. ಇದು ಸಾಮಾನ್ಯವಾಗಿ ಸೆಪ್ಟೆಂಬರ್ 17ರಂದು ಬರುತ್ತದೆ. ವಿಶ್ವಕರ್ಮನನ್ನು ಶಿವನ ಅವತಾರವೆಂದು ಪರಿಗಣಿಸಲಾಗಿದೆ. ವಿಶ್ವಕರ್ಮನಿಗೆ ವಿಶ್ವದಲ್ಲೇ ಮೊದಲ ವಾಸ್ತುಶಿಲ್ಪಿ ಮತ್ತು ಇಂಜಿನಿಯರ್ ಎಂಬ ಬಿರುದನ್ನು ನೀಡಲಾಗಿದೆ.

ಧರ್ಮ ಗ್ರಂಥಗಳಲ್ಲಿನ ನಂಬಿಕೆಯ ಪ್ರಕಾರ, ಅಂಗೀರಸ ಮತ್ತು ವಾಸ್ತುದೇವನಿಗೆ ಜನಿಸಿದ ಮಗನೇ ವಿಶ್ವಕರ್ಮ. ಅದೇ ಸಮಯದಲ್ಲಿ, ಸ್ಕಂದ ಪುರಾಣದ ಒಂದು ದಂತಕಥೆಯ ಪ್ರಕಾರ, ಧರ್ಮ ಋಷಿಯ 8ನೇ ಮಗ ಪ್ರಭಾಸ, ದೇವಗುರು ಬೃಹಸ್ಪತಿಯ ಸಹೋದರಿ ಭುವನ ಬ್ರಹ್ಮವಾದಿನಿಯನ್ನು ವಿವಾಹವಾದನು. ಭಗವಾನ್ ವಿಶ್ವಕರ್ಮ ಈ ಭುವನ ಬ್ರಹ್ಮವಾದಿನಿಯ ಮಗ. ಮಹಾಭಾರತದಲ್ಲಿ ಆತನ ಜನ್ಮವನ್ನು ಉಲ್ಲೇಖಿಸಲಾಗಿದೆ.

ವಿಶ್ವಕರ್ಮನನ್ನು ಸ್ವಯಂಭು ಮತ್ತು ಪ್ರಪಂಚದ ಸೃಷ್ಟಿಕರ್ತ ಎಂದು ಪರಿಗಣಿಸಲಾಗಿದೆ. ಅವನು ಕೃಷ್ಣನು ಆಳಿದ ಪವಿತ್ರ ನಗರವಾದ ದ್ವಾರಕಾವನ್ನು ನಿರ್ಮಿಸಿದನು. ಪಾಂಡವರಿಗೆ ಇಂದ್ರಪ್ರಸ್ಥದ ಅರಮನೆಯನ್ನು ನಿರ್ಮಿಸಿದನು ಮತ್ತು ದೇವತೆಗಳಿಗೆ ಅನೇಕ ಅಸಾಧಾರಣ ಆಯುಧಗಳ ಸೃಷ್ಟಿಕರ್ತನಾಗಿದ್ದನು. ಅವರನ್ನು ದೈವಿಕ ಬಡಗಿ ಎಂದೂ ಕರೆಯಲಾಗುತ್ತದೆ, ಇದನ್ನು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ ಮತ್ತು ಯಂತ್ರಶಾಸ್ತ್ರ ಮತ್ತು ವಾಸ್ತುಶಿಲ್ಪದ ವಿಜ್ಞಾನವಾದ ಸ್ಥಾಪತ್ಯ ವೇದಕ್ಕೆ ಸಲ್ಲುತ್ತದೆ ಎಂದು ಹೇಳಲಾಗುತ್ತದೆ.

ಪವಿತ್ರ ಹಿಂದೂ ಸಂಪ್ರದಾಯದ ಪ್ರಕಾರ, ವಿಶ್ವಕರ್ಮನನ್ನು ಪ್ರಪಂಚದ ದೈವಿಕ ಅಭಿಯಂತರ (ಡಿವೈನ್ ಇಂಜಿನಿಯರ್) ಎಂದು ಕರೆಯಲಾಗುತ್ತದೆ. ವಿಶ್ವಕರ್ಮ ಎಲ್ಲಾ ಕುಶಲಕರ್ಮಿಗಳು ಮತ್ತು ವಾಸ್ತುಶಿಲ್ಪಿಗಳ ಪ್ರಧಾನ ದೇವತೆ. ಅವನು ಇಡೀ ಬ್ರಹ್ಮಾಂಡದ ದೈವಿಕ ಕುಶಲಕರ್ಮಿ ಮತ್ತು ಎಲ್ಲಾ ದೇವತೆಗಳ ಅರಮನೆಗಳ ಅಧಿಕೃತ ನಿರ್ಮಾತೃ ಎಂದು ಹೇಳಿದರೆ ತಪ್ಪಾಗಲಾರದು.

ವಿಶ್ವಕರ್ಮನು ಸತ್ಯಯುಗದ ಸ್ವರ್ಗ ಲೋಕ, ತ್ರೇತಾಯುಗದ ಲಂಕಾ, ದ್ವಾಪರದ ದ್ವಾರಕಾ ಮತ್ತು ಕಲಿಯುಗದ ಹಸ್ತಿನಾಪುರದಂತಹ ಎಲ್ಲ ಪ್ರಸಿದ್ಧ ನಗರಗಳು ಮತ್ತು ರಾಜಧಾನಿಗಳನ್ನು ರಚಿಸಿದನು. ವಿಶ್ವಕರ್ಮನು ಮಹಾದೇವನ ತ್ರಿಶೂಲ, ಶ್ರೀ ಹರಿಯ ಸುದರ್ಶನ ಚಕ್ರ, ಆಂಜನೇಯನ ಗದೆ, ಯಮರಾಜನ ಕಾಲದಂಡ, ಕರ್ಣನ ಕುಂಡಲ ಮತ್ತು ಕುಬೇರನ ಪುಷ್ಪಕ ವಿಮಾನವನ್ನು ಸಹ ನಿರ್ಮಿಸಿದನು. ಈ ಕುಶಲಕರ್ಮಿಗಳು ನೀರಿನ ಮೇಲೆ ನಡೆಯಬಲ್ಲವರಾಗಿದ್ದರೆಂದು ಹೇಳಲಾಗುತ್ತದೆ. ಒಟ್ಟಾರೆಯಾಗಿ ಇಂದು ಸಕಲ ಸೃಷ್ಟಿಕರ್ತ, ದೈವಿ ಶಿಲ್ಪಿ, ಎಲ್ಲಾ ಲೋಕಗಳ ನಿರ್ಮಾಣದ ಕರ್ತೃ ವಿಶ್ವಕರ್ಮನ ಜಯಂತಿಯಂದು ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಬಳಸುವ ಸಾಮಾನು, ಉಪಕರಣಗಳಿಗೆ ಪೂಜೆ ಸಲ್ಲಿಸಲಾಗುವುದು. ವಿಶ್ವ ಕರ್ಮನ ಪೂಜೆಯಿಂದ ವ್ಯಾಪಾರವನ್ನು ಹೆಚ್ಚಿಸುತ್ತದೆ ಎಂದು ನಂಬಲಾಗಿದೆ. ಆದ್ದರಿಂದ ಪ್ರತಿ ವರ್ಷ ವಿಶ್ವಕರ್ಮ ಜನ್ಮ ವಾರ್ಷಿಕೋತ್ಸವದಂದು ಯಂತ್ರಗಳನ್ನು ಮತ್ತು ಕೈಗಾರಿಕಾ ಘಟಕಗಳನ್ನು ಪೂಜಿಸಲಾಗುತ್ತದೆ.



**- ಬಸವರಾಜ ಎಮ್.ಯರಗುಪ್ಪಿ.**
ಬಿಆರ್‌ಪಿ-ಶಿರಹಟ್ಟಿ, ಲಕ್ಷ್ಮೇಶ್ವರ.

# ಮಹಾರಾಣಾ ಪ್ರೌಢಶಾಲಾ ವಿದ್ಯಾರ್ಥಿಗಳ ಸಾಧನೆ

■ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕ ಶಿಕ್ಷಣ ಇಲಾಖೆ ಸಿಆರ್‌ಸಿ-2 ಭಾಗದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದಲ್ಲಿ ನಗರದ ಮಹಾರಾಣಾ ಪ್ರತಾಪಸಿಂಹ ಪ್ರೌಢಶಾಲಾ ಮಕ್ಕಳು ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ಜಾನಕಿ ಮೂಲಿಮನಿ ಕವನ ವಾಚನದಲ್ಲಿ ಪ್ರಥಮ, ಹರ್ಷಾ ವನ್ನಾಲ ಛದ್ಮವೇಷದಲ್ಲಿ ಪ್ರಥಮ, ಶಿವರಾಜ ಮೂಲಿಮನಿ ಜಾನಪದ ಗೀತೆಯಲ್ಲಿ ದ್ವಿತೀಯ, ಚೇತನ ಪವಾರ ಮಿಮಿಕ್ರಿಯಲ್ಲಿ ದ್ವಿತೀಯ, ಪ್ರಸನ್ನ ದ್ಯಾವನಕೊಂಡಿ ಹಾಗೂ ಜಾನಕಿ ಮೂಲಿಮನಿ ರಸಪ್ರಶ್ನೆಯಲ್ಲಿ ತೃತೀಯ, ದೀಪಾ ಹಾಗೂ ಸಂಗಡಿಗರು ಜಾನಪದ ನೃತ್ಯದಲ್ಲಿ ತೃತೀಯ, ರಜಿಯಾ ಢಾಲಾಯತ ಖುರಾನ ಪಠಣದಲ್ಲಿ ತೃತೀಯ ಸ್ಥಾನಗಳನ್ನು ಪಡೆದು ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆಯಾಗಿದ್ದಾರೆ.

ತರಬೇತಿ ನೀಡಿದ ಶಿಕ್ಷಕರಿಗೆ ಹಾಗೂ ವಿಜೇತ ವಿದ್ಯಾರ್ಥಿಗಳಿಗೆ ಮುಖ್ಯಾಧ್ಯಾಪಕ ಎಸ್.ಎಸ್ ಬಡಿಗೇರ ಅಭಿನಂದನೆಗಳನ್ನು ಸಲ್ಲಿಸಿ ಶುಭ ಹಾರೈಸಿದ್ದಾರೆ.

# ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯ ಜಾಗೃತಿ, ಲಿಂಗಸಮಾನತೆ, ರಾಷ್ಟ್ರೀಯತೆ, ಮೌಢ್ಯ ನಿವಾರಣೆ ದುಶ್ಚಟಗಳ ಕುರಿತು ಮಾಹಿತಿ, ಹದಿಹರೆಯದವರ ಸಮಸ್ಯೆಗಳು ಕುರಿತು ತಿಳಿಯಲು ಸಹಕಾರಿಯಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಹೇಳಿದರು.

ಅವರು ಗುರುವಾರ ಗದಗ ಜಿಲಾ ತರಬೇತಿ ಸಂಸ್ಥೆಯಿಂದ ಬೆಟಗೇರಿಯ ಎಸ್‌ಎಸ್‌ಕೆ ಶಾಲೆಯಲ್ಲಿ ಜರುಗಿದ ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಕ್ಕಳು ಜಾಗೃತಿ ಬಿಂಬಿಸುವ ಜನಪದ ನೃತ್ಯ, ಪಾತ್ರಾಭಿನಯ, ನಾಟಕ, ಸಂವಾದಗಳ ಮೂಲಕ ಪ್ರೇಕ್ಷಕರ ಮನಮುಟ್ಟುವಂತೆ ಪ್ರಚಲಿತ ಸಮಸ್ಯೆಗಳ ಕುರಿತು ಕಾರ್ಯಕ್ರಮ ಮಾಡಬೇಕೆಂದರು.

ಎಸ್.ಎಸ್.ಕೆ ಶಾಲೆಯ ಮುಖ್ಯೋಪಾಧ್ಯಾಯೆ ಶಿಲ್ಪಾ ಬೆನಕಲ್ಲ ಮಾತನಾಡಿ, ಈ ಕಾರ್ಯಕ್ರಮದ ಅನುಷ್ಠಾನದಿಂದಾಗಿ ಮಕ್ಕಳು ಹಲವಾರು ವಿಷಯಗಳ ಕುರಿತು ತಿಳುವಳಿಕೆ ಪಡೆಯಬಹುದು ಎಂದರು. ಅತಿಥಿಗಳಾಗಿ ಡೈಟ್ ಉಪನ್ಯಾಸಕರಾದ ಜೆ.ಡಿ ದಾಸರ, ರಘುವೀರ ಲಮಾಣಿ, ಸಮನ್ವಯ ಅಧಿಕಾರಿ ಎಚ್.ವ್ಹಿ ಫಾರೂಕಿ ಹಾಗೂ ಶ್ರೀಕಾಂತ ಬಡ್ಡೂರ ಪಾಲ್ಗೊಂಡಿದ್ದರು. ಸಂಪನ್ಮೂಲ ವ್ಯಕ್ತಿ ಪ್ರಕಾಶ ಮಂಗಳೂರ ಸ್ವಾಗತಿಸಿದರು. ಐ.ಬಿ ಮಡಿವಾಳರ ಪರಿಚಯಿಸಿದರು. ಶ್ಯಾಮ್ ಲಾಂಡೆ ನಿರೂಪಿಸಿದರೆ, ಕೆ.ಎಸ್ ಬೇಲೇರಿ ವಂದಿಸಿದರು.

# ನಿಜಗುಣಪ್ರಭು ಶ್ರೀಗಳಿಗೆ ರಕ್ಷಣೆ ಒದಗಿಸಲು ಮನವಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಮುಂಡರಗಿ-ಬೈಲೂರ ಜಗದ್ಗುರು ತೋಂಟದಾರ್ಯ ಶಾಖಾಮಠದ ನಿಜಗುಣಪ್ರಭು ಸ್ವಾಮೀಜಿ ಅವರಿಗೆ ಅನಾಮಧೇಯ ವ್ಯಕ್ತಿ ಕೊಲೆ ಬೆದರಿಕೆ ಹಾಕಿರುವುದನ್ನು ಖಂಡಿಸಿ ಶುಕ್ರವಾರ ಪಟ್ಟಣದ ಶ್ರೀಮಠದ ಭಕ್ತರು ಹಾಗೂ ತಾಲೂಕಾ ಛಲವಾದಿ ಮಹಾಸಭಾ, ಡಾ. ಬಿ.ಆರ್ ಅಂಬೇಡ್ಕರ ಕಟ್ಟಡ ಕಾರ್ಮಿಕರ ಸಂಘ, ನಿಸರ್ಗ ಕಟ್ಟಡ ಸಂಘ, ಕನ್ನಡಪರ ಸಂಘ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ತಹಸೀಲ್ದಾರ ಧನಂಜಯ್ ಎಂ ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಶ್ರೀಮಠದ ಕಾರ್ಯದರ್ಶಿ ಕೊಟ್ರೇಶ ಅಂಗಡಿ ಮಾತನಾಡಿ, ಶ್ರೀಗಳಿಗೆ ಕೊಲೆ ಬೆದರಿಕೆ ಹಾಕಿರುವುದು ನೋವು ತಂದಿದ್ದು, ಭಕ್ತರಲ್ಲಿ ಅತಂಕ ಮನೆಮಾಡಿದೆ. ಕೂಡಲೇ ಸರಕಾರ ಕೊಲೆ ಬೆದರಿಕೆ ಹಾಕಿದ ಅನಾಮಧೇಯ ವ್ಯಕ್ತಿಯನ್ನು ಪತ್ತೆಹಚ್ಚಿ, ಬಂಧಿಸಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕ ಮುಖಂಡ ಅಡಿವೆಪ್ಪ ಛಲವಾದಿ ಮಾತನಾಡಿ, ನಿಜಗುಣಾಂದ ಶ್ರೀಗಳಿಗೆ ಪದೇ ಪದೇ ಜೀವ ಬೆದರಿಕೆ ಪತ್ರಗಳು ಬರುತ್ತಿವೆ. ರಾಜ್ಯದಲ್ಲಿ ಶರಣರಿಗೆ ರಕ್ಷಣೆ ಇಲ್ಲದಂದತಾಗಿದೆ. ಕೂಡಲೇ ದುಷ್ಕರ್ಮಿಗಳನ್ನು ಬಂಧಿಸಬೇಕು ಮತ್ತು ಸರಕಾರ ಶ್ರೀಗಳಿಗೆ ಸೂಕ್ತ ರಕ್ಷಣೆ ಕೊಡಬೇಕು ಎಂದು ಆಗ್ರಹಿಸಿದರು.

ಈ ಸಂಧರ್ಭದಲ್ಲಿ ಎಚ್.ವಿರುಪಾಕ್ಷಗೌಡ್ರ, ಫಾಲಕ್ಷೀ ಗಣದಿನ್ನಿ, ಸತ್ಯಪ್ಪ ಛಲವಾದಿ, ಎನ್.ಡಿ ಕೆಲೂರ, ಎ.ಕೆ ಮುಲ್ಲಾನವರ, ರಾಜಾಬಕ್ಷೀ ಬೆಟಗೇರಿ, ಅಡಿವೆಪ್ಪ ಛಲವಾದಿ, ಮಂಜುನಾಥ ಕಟ್ಟಿಮನಿ, ನಿಂಗರಾಜ ಹಾಲಿನವರ, ಅಶೋಕ ಹುಬ್ಬಳಿ, ಪವನ ಛೋಪ್ರಾ, ನಾಗರಾಜ ಹೊಂಬಳಗಟ್ಟಿ, ಬಸಯ್ಯ ಡಂಬಳಮಠ, ಸೋಮಣ್ಣ ಹೈತಪೂರ, ದೇವು ಹಡಪದ, ಶಿವು ವಾಲಿಕಾರ, ಬಸವರಾಜ ಹೂಗಾರ, ರೈಮಾನಸಾಬ ಮಲ್ಲಿನಕೇರಿ, ದೇವಪ್ಪ ಚಿಕ್ಕಣನವರ, ಯಲ್ಲಪ್ಪ ಭಜಂತ್ರಿ, ಯಲ್ಲಪ್ಪ ಬೊಮ್ಮೈಯ, ಹಸನ್ ಅಳವಂಡಿ, ದುರಗಪ್ಪ ಹರಿಜನ, ನಾಗರಾಜ ರಾಮೇನಹಳ್ಳಿ ಮುಂತಾದವರಿದ್ದರು.



## ಉತ್ತರ ಕರ್ನಾಟಕ ದೇಸಿ ಅಡುಗೆ ಸ್ಪರ್ಧೆ-ಸಿರಿಧಾನ್ಯಗಳಲ್ಲಿ ಸಿಹಿ, ಖಾರ ಅಡುಗೆ

# ಅಡುಗೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ತೋಂಟದ ಸಿದ್ದಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಮಹಿಳಾ ಘಟಕ 'ಗದಗ ಉತ್ಸವ'ದ ಅಂಗವಾಗಿ ಏರ್ಪಡಿಸಿದ್ದ ಉತ್ತರ ಕರ್ನಾಟಕ ದೇಸಿ ಅಡುಗೆ ಸ್ಪರ್ಧೆ-ಸಿರಿಧಾನ್ಯಗಳಲ್ಲಿ ಸಿಹಿ, ಖಾರ ಅಡುಗೆ ಸ್ಪರ್ಧೆಯ ವಿಜೇತರುಗಳಿಗೆ ಬುಧವಾರ ಬಹುಮಾನ ನೀಡಿ ಗೌರವಿಸಲಾಯಿತು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಮಣ್ಣೂರ, ಅಡುಗೆ ಪರಿಣಿತೆ ಕಸ್ತೂರಿಬಾಯಿ ದಾನಪ್ಪಗೌಡ್ರ, ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ತಾತನಗೌಡ ಪಾಟೀಲ ವಿಜೇತರಿಗೆ ಬಹುಮಾನ ವಿತರಿಸಿದರು. ಸ್ಪರ್ಧೆಯ ಖಾರಾ ತಿನಿಸು ವಿಭಾಗದಲ್ಲಿ ರೇಣುಕಾ ಅಮಾತ್ಯ, ಗಂಗಾ ತಂಗೋಡಿ, ಲಲಿತಾ ಉಮನಾಬಾದಿ, ಸಿಹಿ ತಿನಿಸು ವಿಭಾಗದಲ್ಲಿ ಪಾರ್ವತಿ ಶಾಬಾದಿಮಠ, ಭಾಗ್ಯ ಕೊರ್ಲಹಳ್ಳಿ, ದ್ರಾಕ್ಷಾಯಣಿ ಗುಗ್ಗರಿ ಅವರು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಪಡೆದುಕೊಂಡಿದ್ದಾರೆ.

ಸಿರಿಧಾನ್ಯ ಅಡುಗೆಯ ಸಿಹಿ ತಿನಿಸು ವಿಭಾಗದಲ್ಲಿ ಫರೀಧಾಬಾನು ದೊಡ್ಡಮನಿ, ಭಾಗ್ಯಲಕ್ಷ್ಮೀ ಶಿರೋಳ, ಮಂಜುಳಾ ತಂಗೋಡಿ, ಸಿರಿಧಾನ್ಯ ಅಡುಗೆಯ ಖಾರಾ ತಿನಿಸು ವಿಭಾಗದಲ್ಲಿ ನೀಲಾಂಬಿಕಾ ತೋಟದ, ಭಾಗ್ಯಶ್ರೀ ಬೋರಣ್ಣವರ, ಜ್ಯೋತಿ ಉಮನಾಬಾದಿ ಅವರು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಪಡೆದುಕೊಂಡಿದ್ದಾರೆ.

ವಿದ್ಯಾ ಪ್ರಭು ಗಂಜಿಹಾಳ, ಸುಷ್ಮಾ ಸೋಮನಾಥ ಜಾಲಿ ಇವರಿಗೆ ವಿಶೇಷ ಬಹುಮಾನ, ರೇಣುಕಾ ಬಾಗ್ಲಿ, ನಾಗರತ್ನಾ ಟೆಂಗಿನಕಾಯಿ, ಲಲಿತಾ ಇರಸಪ್ಪನವರ, ಸುಮಂಗಲಾ ಹದ್ಲಿ ಇವರಿಗೆ ಸಮಾಧಾನಕರ ಬಹುಮಾನ ನೀಡಿ ಗೌರವಿಸಲಾಯಿತು. ಭಾಗವಹಿಸಿದ ಎಲ್ಲ 25 ಸ್ಪರ್ಧಾಳುಗಳಿಗೆ ಪ್ರಮಾಣಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಘಟಕದ ಗೌರವ ಕಾರ್ಯದರ್ಶಿ ಸುವರ್ಣಾ ಮದರಿಮಠ, ಮಹಿಳಾ ಘಟಕದ ಉಪಾಧ್ಯಕ್ಷರಾದ ಶೋಭಾ ಸಂಶಿಮಠ, ನೀಲಾಂಬಿಕಾ ತೋಟದ, ವೀಣಾ ಪೋತ್ನೀಸ್, ಸಹ ಗೌರವ ಕಾರ್ಯದರ್ಶಿ ಪ್ರಭಾ ಗದಗ, ಸುರೇಖಾ ಮಲ್ಲಾಡದ, ಜ್ಯೋತಿ ದಾನಪ್ಪಗೌಡ್ರ, ಸುಷ್ಮಾ ಜಾಲಿ, ಸುಜಾತಾ ಗುಡಿಮನಿ, ವಿದ್ಯಾ ಹುಲಬನ್ನಿ, ಸ್ನೇಹಾ ಹಿರೇಮಠ, ವೀಣಾ ಸುಲಾಖೆ, ಸಂಸ್ಥೆಯ ಎಲ್ಲ ಪದಾಧಿಕಾರಿಗಳು, ಗದಗ ಉತ್ಸವ ಸಮಿತಿಯ ಎಲ್ಲ ಪದಾಧಿಕಾರಿಗಳಿದ್ದರು.

ವಿಮಲ್ ರೆಸಾರ್ಟ್, ದತ್ತಾ ಡೆವಲಪರ್ಸ್, ಬಾಗಮಾರ ಫರ್ನಿಚರ್ಸ್, ವಿಜಯಲಕ್ಷ್ಮೀ ಫನಿಚರ್ಸ್, ಕವಾಡ ಆಲ್ ಮಾರ್ಟ್, ಪಿ.ಎಸ್ ಶಾಬಾದಿಮಠ, ಎಸ್‌ಬಿಐ ಬಹುಮಾನದ ಪ್ರಾಯೋಜಕತ್ವ ವಹಿಸಿಕೊಂಡಿದ್ದರು. ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಮಹಿಳಾ ಘಟಕವು ಸಮಾಧಾನಕರ ಬಹುಮಾನದ ಪ್ರಾಯೋಜಕತ್ವ ವಹಿಸಿಕೊಂಡಿದ್ದರು.

# ಮಕ್ಕಳ ಕಲಿಕೆಗೆ ನೀಡುವ ದಾನ ಅತ್ಯಂತ ಶ್ರೇಷ್ಠ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮಕ್ಕಳ ಕಲಿಕೆಗೆ ನೀಡುವ ದಾನ ಅತ್ಯಂತ ಶ್ರೇಷ್ಠವಾದ ದಾನವಾಗುತ್ತದೆ ಎಂದು ಗದಗ ಗ್ರಾಮೀಣ ಪ್ರೌಢಶಾಲಾ ವಿಭಾಗದ ಬಿಆರ್‌ಪಿ ಪಿ.ಸಿ ಸೊಲಬಣ್ಣವರ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಶೀತಾಲಹರಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಮತ್ತು ಇಂಜಿನಿಯರ್ ದಿನ ಆಚರಿಸಿ, ಬೆಂಗಳೂರಿನ ಇಂಜಿನಿಯರ್ ವಿನಯ ಕೆ.ಪ್ರಸಾದ ಒದಗಿಸಿದ ಉಚಿತ ಬ್ಯಾಗ್, ನೀರಿನ ಬಾಟಲ್‌ಗಳನ್ನು ಮಕ್ಕಳಿಗೆ ವಿತರಿಸಿ ಮಾತನಾಡಿದರು.



ವಿನಯ ಕೆ.ಪ್ರಸಾದ ಮಾತನಾಡಿ, ನಮ್ಮ ಕಂಪನಿಯಿಂದ ಪ್ರತಿ ವರ್ಷ 3 ಸಾವಿರ ಸರಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ಪೂರಕ ಸಾಮಗ್ರಿಗಳನ್ನು ನೀಡುತ್ತಾ ಬಂದಿದ್ದು, ಮಕ್ಕಳು ಕಲಿಕೆಯಲ್ಲಿ ಶ್ರದ್ಧೆ ಹೊಂದಬೇಕು. ಗುರುಗಳು ಹೇಳಿದ ಪಾಠಗಳನ್ನು ನಿಷ್ಠೆಯಿಂದ ಆಲಿಸಿ, ಉನ್ನತ ಸ್ಥಾನಕ್ಕೆ ಬರಬೇಕು ಎಂದರು. ಸಿಆರ್‌ಪಿ ಎಂ.ಎಂ ನಿಂಬನಾಯ್ಕರ್ ಮಾತನಾಡಿದರು. ಕೃಷ್ಣಾ ಲಮಾಣಿ, ವಿ.ಸಿ ನೆರೆಗಲ್ಲಮಠ, ಎಸ್‌ಡಿಎಂಸಿ ಅಧ್ಯಕ್ಷ ಗುಡದಪ್ಪ ಗಂಟಿ, ಮಲ್ಲಣ್ಣ ಡೊಳ್ಳಿನ, ಪರಶುರಾಮ ಡೊಳ್ಳಿನ, ಶಾಲಾ ಪ್ರಧಾನ ಗುರು ಎಂ.ಎ ನಧಾಫ್, ರಮೇಶ ಕುರಿ, ವೀರಸ್ವಾಮಿ ಹಿರೇಮಠ ಇದ್ದರು.

## ನಾಲ್ವತವಾಡ ವೀರೇಶ್ವರ ಶರಣರ ಪುರಾಣ ಮಂಗಲ ಕಾರ್ಯಕ್ರಮದಲ್ಲಿ ಜ.ವಚನಾನಂದ ಶ್ರೀಗಳು

# ಪುರಾಣ ಪ್ರವಚನದಿಂದ ಮನಃಪರಿವರ್ತನೆ

■ವಿಜಯಸಾಕ್ಷಿ ಸುದ್ದಿ, ಗದಗ

ಶ್ರವಣ ಅಂದರೆ ಆಲಿಸುವದು, ಕೇಳುವದು ಎಂದರ್ಥ. ತಿಂಗಳಾದ್ಯಂತ ಪುರಾಣ, ಪುಣ್ಯಕತೆ, ಪ್ರವಚನ ಕೇಳುವದು. ಈ ಕೇಳುವಿಕೆಯಿಂದ ಮನಃಪರಿವರ್ತನೆ ಆಗುವದು ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜ.ವಚನಾನಂದ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಗದುಗಿನ ಒಕ್ಕಲಗೇರಿಯ ಶ್ರೀ ರಾಯಚೋಟಿ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿಯು ಶ್ರಾವಣ ಮಾಸದ ಪ್ರಯುಕ್ತ ಏರ್ಪಡಿಸಿದ್ದ ನಾಲ್ವತವಾಡ ಶ್ರೀ ವೀರೇಶ್ವರ ಶರಣರ ಪುರಾಣ ಪ್ರವಚನ ಸಮಾರೋಪ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.



ನಾವಿಂದು ಮೊಬೈಲ್, ಟಿ.ವ್ಹಿ, ಸಿನೆಮಾ ಹಾವಳಿಯಿಂದಾಗಿ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವದು, ಸಂಸ್ಕಾರ, ಸಂಸ್ಕೃತಿಯನ್ನು ರೂಢಿಸುವ ವೈಚಾರಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವದು ಕಡಿಮೆಯಾಗಿದೆ. ಪರಿಣಾಮವಾಗಿ ದೈಹಿಕ ಶ್ರಮವಿಲ್ಲದೆ ಆಲಸಿಗಳಾಗಿದ್ದೇವೆ.

ಮೈಮುರಿದು ಕೆಲಸ ಮಾಡಬೇಕು, ದೇಹವನ್ನು ದಂಡಿಸಬೇಕು. ಅಂದಾಗ ಆರೋಗ್ಯ ಸದೃಢಗೊಳ್ಳುವದು ಎಂದರು.

ಉತ್ತಮ ಆರೋಗ್ಯಕ್ಕಾಗಿ ವಾಯು ವಿಹಾರ, ಯೋಗ, ಧ್ಯಾನ, ಲಘು ಸಂಗೀತ ಆಲಿಸಿ. ತರಕಾರಿ ಸೇವಿಸಿ, ಸಕ್ಕರೆ ಬದಲು ಬೆಲ್ಲ ಉಪಯೋಗಿಸಿ, ನೀರಿನ ಬಾಟಲ್‌ಗಳನ್ನು ಮರುಬಳಕೆ ಮಾಡಬೇಡಿ. ಬದಲಾಗಿ ತಾಮ್ರ, ಸ್ಟೀಲ್ ಬಾಟಲ್‌ಗಳನ್ನು ಉಪಯೋಗಿಸಿ, ನೆಲದ ಮೇಲೆ ಕುಳಿತು ಊಟ ಮಾಡುವದನ್ನು ರೂಢಿಸಿಕೊಳ್ಳಿ ಎಂದು ಉತ್ತಮ ಆರೋಗ್ಯದ ಸಲಹೆ ನೀಡಿದರು.

ಒಕ್ಕಲಿಗರು ಹೆಚ್ಚಾಗಿ ನೆಲೆಸಿರುವ ಭಕ್ತವಂತರ, ಜ್ಞಾನವಂತರ ಪ್ರದೇಶವಿದು. ಈ ದೇವಸ್ಥಾನದಲ್ಲಿ ಪ್ರತಿವರ್ಷ ಟ್ರಸ್ಟ ಕಮಿಟಿ ಶರಣರ, ದಾರ್ಶನಿಕರ ಪುರಾಣ ಪ್ರವಚನ ಕಾರ್ಯಕ್ರಮ ಏರ್ಪಡಿಸುವ ಮೂಲಕ ಧರ್ಮ ಕಾರ್ಯ, ಜ್ಞಾನ ಪಸರಿಸುವ ಕಾರ್ಯವನ್ನು, ಶ್ರದ್ಧಾಭಕ್ತಿಯನ್ನು ಹಾಗೂ ದಾಸೋಹ ಕೈಂಕರ್ಯವನ್ನು ಮುಂದುವರೆಸಿಕೊಂಡು ಬಂದಿರುವದು ಅಭಿನಂದನೀಯ.

**- ಜ.ವಚನಾನಂದ ಮಹಾಸ್ವಾಮಿಗಳು.**

ಸಮಾರಂಭದ ಅಧ್ಯಕ್ಷತೆಯನ್ನು ಟ್ರಸ್ಟ್ ಕಮಿಟಿ ಅಧ್ಯಕ್ಷ ಎಸ್.ಎ ಮೊರಬದ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿರ್ದೇಶಕ ಕೊಟ್ರಪ್ಪ ಕಮತರ, ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಈರಣ್ಣ ಕರಬಿಷ್ಠಿ, ಮುರಿಗೆಪ್ಪ ಕರೂಗಲ್ಲ ಆಗಮಿಸಿದ್ದರು.

ಪಂ. ಎಂ.ಕಲ್ಲಿನಾಥ ಶಾಸ್ತ್ರೀಗಳು ಅವರಿಂದ ಪ್ರವಚನ, ಜಗನ್ನಾಥಸಾ ಕಲಬುರ್ಗಿ ಶಂಭು ಅರ್ಕಸಾಲಿ, ಹುಸೇನಸಾಬ ಕಲೇಗಾರ ಅವರಿಂದ ಪ್ರಾರ್ಥನೆ, ಸಂಗೀತ ಜರುಗಿತು. ಫಕ್ಕೀರಗೌಡ ಮರಿಗೌಡ್ರ ಪ್ರಾಸ್ತಾವಿಕವಾಗಿ ಮಾತನಾಡಿದರು, ಜಿ.ಬಿ ಹಾವಣಗಿ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಎಂ.ಎಂ ಹಿರೇಮಠ, ವ್ಹಿ.ಎಸ್ ಅಕ್ಕಿ, ರಾಚಣ್ಣ ಚವಡಿ, ಶೇಖಣ್ಣ ಹೊಂಬಳ, ಮಲ್ಲಯ್ಯ ಹಿರೇಮಠ, ಬಸವರಾಜ ಮಡಿವಾಳರ, ಸಿದ್ಧಲಿಂಗಪ್ಪ ಅರಳಿ, ಸೋಮಣ್ಣ ಪುರದ, ವೀರಣ್ಣ ಹುಣಶೀಕಟ್ಟಿ, ಕೆ.ಕೆ ಮಾಳವಾಡ, ಶಿವಾನಂದ ಪಲ್ಲೇದ, ಈರಣ್ಣ ಹೊನಗಣ್ಣವರ, ಗಂಗಾಧರ ನಂದಿಕೋಲ, ತೋಟಪ್ಪ ಕರಮುಡಿ, ಮಹೇಂದ್ರ ಪಾಲರೇಶ ಸೇರಿದಂತೆ ಭಕ್ತಾಧಿಗಳು ಪಾಲ್ಗೊಂಡಿದ್ದರು.

# ಸಮ ಸಮಾಜ ನಿರ್ಮಾಣದಲ್ಲಿ ಸಂವಿಧಾನದ ಪಾತ್ರ ಮಹತ್ವದ್ದು

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸಮ ಸಮಾಜ ನಿರ್ಮಾಣದಲ್ಲಿ ಭಾರತದ ಸಂವಿಧಾನದ ಪಾತ್ರ ತುಂಬಾ ಪ್ರಮುಖವಾಗಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ.ರವಿ ಹೇಳಿದರು.

ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸೆಪ್ಟೆಂಬರ್ 15ರಂದು ಆಯೋಜಿಸಿದ್ದ ಸಂವಿಧಾನ ಓದು ಕಾರ್ಯಕ್ರಮದಲ್ಲಿ ಭಾರತ ಸಂವಿಧಾನದ ಪ್ರಸ್ತಾವನೆಯ ಬೋಧನೆಯ ನಂತರ ಮಾತನಾಡಿದ ಅವರು, ಭಾರತದ ಅನೇಕ ಸಾಮಾಜಿಕ ವೈರುಧ್ಯಗಳಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನವೇ ಪರಿಹಾರ ಎಂದರು.

ದೇಶದ ಇಂದಿನ ಯುವಪೀಳಿಗೆಯು ಭಾರತದ ಸಂವಿಧಾನದ ಆಶೋತ್ತರಗಳನ್ನು ಅರಿತುಕೊಳ್ಳುವ ಅಗತ್ಯವಿದೆ ಎಂದು ಅವರು ಹೇಳಿದರು.

ದೇಶದ ಶೋಷಿತರ, ಅವಕಾಶ ವಂಚಿತ ಸಮುದಾಯಗಳ, ಬಡವರ ಹಾಗೂ ಮಹಿಳೆಯರ ಸಬಲೀಕರಣದಲ್ಲಿ ಭಾರತದ ಸಂವಿಧಾನದ ಕೊಡುಗೆ ಅಪಾರ ಎಂದು ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ.ಮನೋಜ ಡೊಳ್ಳಿ, ಸಹಾಯಕ ಪ್ರಾಧ್ಯಾಪಕರಾದ ಡಾ.ಛಲವಾದಿ ಸಿ.ಐ., ಡಾ.ಚಾಂದ ಪಾಷಾ ಹಾಗೂ ಅತಿಥಿ ಉಪನ್ಯಾಸಕರಾದ ಡಾ.ಪ್ರವೀಣ ಪಾಟೀಲ ಅವರು ಮಾತನಾಡಿದರು. ಡಾ.ಸುಧಾಕರ್ ನಿರೂಪಿಸಿದರು. ಷಣ್ಮುಖ ಬಿ. ಸ್ವಾಗತಿಸಿದರು. ಡಾ.ಶ್ವೇತಾ ವಂದಿಸಿದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ವಿದ್ಯಾರ್ಥಿ ಜೀವನದಿಂದಲೇ ದೈಹಿಕ ಚಟುವಟಿಕೆ ಅಳವಡಿಸಿಕೊಳ್ಳಿ

▶▶ಮೊದಲನೇ ಪುಟದಿಂದ

ಇಲ್ಲಿ ಅಗತ್ಯಕ್ಕೆ ತಕ್ಕಂತೆ ದೈಹಿಕ ಶಿಕ್ಷಕರ ನೇಮಕಾತಿ ಕಳೆದ ಹಲವಾರು ವರ್ಷಗಳಿಂದ ಆಗಿಲ್ಲ. ಈ ಬಗ್ಗೆ ಸದನದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಗಮನ ಸೆಳೆಯಲಾಗಿದೆ. ಕಾನೂನು ಸಚಿವರು ಹಾಗೂ ಸಂಪುಟದ ಹಿರಿಯ ಸಚಿವರಾದ ಎಚ್.ಕೆ.ಪಾಟೀಲ ಅವರು ದೈಹಿಕ ಶಿಕ್ಷಕರ ನೇಮಕಾತಿ ಕುರಿತು ಗಮನ ಹರಿಸುವಂತೆ ಕೋರಿದರು.

ಕಳೆದ ವರ್ಷ ಕರಾಟೆ ಹಾಗೂ ಯೋಗ ಸ್ಪರ್ಧೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಪಾಲ್ಗೊಳ್ಳುವ ಮೂಲಕ ಕ್ರೀಡಾಸ್ಫೂರ್ತಿ ಮೆರೆದಿದ್ದು ಇನ್ನೂ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಹಲವು ಕ್ರೀಡೆಗಳಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ಸಾಧನೆ ಮಾಡಲು ಅಣಿಯಾಗಬೇಕಿದೆ ಎಂದರು. ವೇದಿಕೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಾ.ಕೃಷ್ಣಪ್ಪ, ಜಿ.ಎನ್. ಕುರ್ತಕೋಟಿ, ಎಂ.ಸಿ. ಕಟ್ಟಿಮನಿ, ಸೋಮಣ್ಣ ಸೇರಿದಂತೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು, ಮಕ್ಕಳು ಹಾಜರಿದ್ದರು. ಬಿಪಿನ್ ಚಿಕ್ಕಟ್ಟಿ ಪದವಿ ಪೂರ್ವ ಕಾಲೇಜಿನ ಪ್ರೊ. ಎಸ್.ವೈ. ಚಿಕ್ಕಟ್ಟಿ ಅವರು ಅತಿಥಿಗಳನ್ನು ಸ್ವಾಗತಿಸಿ ವಂದಿಸಿದರು.

# ಕಾನೂನು ಸುವ್ಯವಸ್ಥೆ ಕಾಪಾಡಿ: ಡಿಸಿ ಸೂಚನೆ

▶▶ಮೊದಲನೇ ಪುಟದಿಂದ

ಕರ್ತವ್ಯಗಳು ಗಣೇಶ ಹಬ್ಬದ ಸಂದರ್ಭದಲ್ಲಿ ತಮ್ಮ ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು. ಗಣೇಶ ಪ್ರತಿಷ್ಠಾಪನೆಗೆ ಅಗತ್ಯವಿರುವ ಸ್ಥಳ, ಪೆಂಡಾಲ್, ವಿದ್ಯುತ್ ಸಂಪರ್ಕ, ಇನ್ನು ಮುಂತಾದ ಪರವಾನಿಗೆಗಳನ್ನು ನೀಡಲು ಲೋಕೋಪಯೋಗಿ, ಇಂಧನ, ಅಗ್ನಿಶಾಮಕ ಮತ್ತು ಪೊಲೀಸ್ ಇಲಾಖೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಂಯೋಜಕರಾಗಿ ಗಣೇಶ ವಿಗ್ರಹ ಸ್ಥಾಪನೆಗೆ ಅಗತ್ಯವಿರುವ ಪರವಾನಗಿಯನ್ನು ಮುಂಚಿತವಾಗಿ ನೀಡಲು ಸೂಕ್ತ ಕ್ರಮ ವಹಿಸಬೇಕು. ಪಿ.ಓ.ಪಿ. ಗಣೇಶ ಮೂರ್ತಿಗಳನ್ನು ಸ್ಥಾಪಿಸಲು ಅವಕಾಶ ನೀಡಬಾರದು. ಪಿ.ಓ.ಪಿ. ಗಣೇಶ ಮೂರ್ತಿಗಳ ತಯಾರಿಕೆ ಘಟಕಗಳಿಗೆ, ಮಾರಾಟ ಮಾಡುವ ಸ್ಥಳಗಳಿಗೆ ಅನಿರೀಕ್ಷಿತ ದಾಳಿ ಮಾಡಿ ಅಂತಹ ವಿಗ್ರಹಗಳನ್ನು ಜಪ್ತಿ ಮಾಡುವುದು, ಪಿ.ಓ.ಪಿ. ಮೂರ್ತಿಗಳಿಂದ ಪರಿಸರಕ್ಕೆ ಉಂಟಾಗುವ ನಷ್ಟದ ಬಗ್ಗೆ ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಶಿಬಿರ ಏರ್ಪಡಿಸಿ ಕಲಿಕಾರ್ಥಿಗಳಿಗೆ ಜಾಗೃತಿ ಮೂಡಿಸುವುದು, ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಬಣ್ಣರಹಿತ ಮಣ್ಣಿನ ಗಣೇಶ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ ತದನಂತರ ಸ್ಥಳೀಯ ಸಂಸ್ಥೆಗಳು ನಿಗದಿಪಡಿಸಿದ ಸ್ಥಳದಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸುವುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

ವಿಶೇಷವಾಗಿ ಹೈ ಟೆನ್ಷನ್ ತಂತಿ ಹಾದು ಹೋಗಿರುವ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ಗಣೇಶ ಮೂರ್ತಿಯನ್ನು ಸ್ಥಾಪಿಸಲು ಅನುಮತಿ ನಿರ್ಬಂಧಿಸುವುದು. ಸಾರ್ವಜನಿಕವಾಗಿ ಇಡುವ ಗಣೇಶ ವಿಗ್ರಹಗಳನ್ನು ಪ್ರತಿ ಸಮಿತಿಯವರು ಕಡ್ಡಾಯವಾಗಿ ಸ್ಥಳೀಯ ಸಂಸ್ಥೆಗಳು ಮತ್ತು ಪೊಲೀಸ್ ಇಲಾಖೆಯಿಂದ ಅನುಮತಿಗಳನ್ನು ಪಡೆದ ನಂತರವೇ ಸ್ಥಾಪಿಸುವುದು, ಅನುಮತಿ ಪತ್ರಗಳನ್ನು ಲೈಸನ್ಸ್ ನೀಡುವ ಸಂದರ್ಭಗಳು ಪ್ಲಾಸ್ಟಿಕ್ - ಫ್ಲೆಕ್ಸ್ ಮತ್ತಿತರ ವಸ್ತುಗಳ ಬಳಕೆ ನಿಷೇಧಿಸುವುದು ಹಾಗೂ ರಾತ್ರಿ 10 ರಿಂದ ಬೆ 5 ಗಂಟೆಯವರೆಗೆ ಧ್ವನಿವರ್ಧಕಗಳ ಬಳಕೆ ನಿಷೇಧಿಸುವುದು. ಕಾಲಕಾಲಕ್ಕೆ ನೀಡಲಾಗುವ ಇತರೆ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ತಿಳಿಸಿದ್ದಾರೆ.

### ಸೋಮೇಶ್ವರ ದೇವಸ್ಥಾನದ ಪುರಾಣ ಮಂಗಲ ಸಮಾರಂಭದಲ್ಲಿ ಮುಕ್ತಿಮಂದಿರ ಶ್ರೀಗಳು

# ಮನುಷ್ಯನಿಗೆ ಸದ್ಗುಣಗಳೇ ಶ್ರೀರಕ್ಷೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಮ್ಮ ನಾಡಿನ ಗುಣವೇ ಶ್ರೇಷ್ಠತೆಯಿಂದ ಕೂಡಿದ್ದು, ಇಲ್ಲಿ ಸಾವಿರಾರು ಮಹಾತ್ಮರು, ಶರಣ ಶರಣೆಯರು ದೈವಿಸ್ವರೂಪದಲ್ಲಿ ಕಾಣಿಸಿಕೊಂಡು ಭಕ್ತರರಿಗೆ ಮಾರ್ಗದರ್ಶನ ಮಾಡಿದ್ದಾರೆ. ಇಂತಹ ಶ್ರೇಷ್ಠರಲ್ಲಿ ವೀರಶೈವ ಧರ್ಮದ ಮಹತ್ವವನ್ನು ತಿಳಿಸಲು ಭೂಮಿಗೆ ಅವತರಿಸಿದ ಯುಗಪುರುಷ ರೇಣುಕರು ನೀಡಿದ ಸಂದೇಶ ಸರ್ವಕಾಲಕ್ಕೂ ಸತ್ಯವಾಗಿ ಉಳಿದುಕೊಂಡಿವೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಅವರು ಪಟ್ಟಣದ ಐತಿಹಾಸಿಕ ಸೋಮೇಶ್ವರ ದೇವಸ್ಥಾನದಲ್ಲಿ ಸೋಮೇಶ್ವರ ದೇವಸ್ಥಾನದ ಪುರಾಣ ಸೇವಾ ಸಮಿತಿ ವತಿಯಿಂದ ಶ್ರಾವಣ ಮಾಸದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ರೇಣುಕ ವಿಜಯ ಪುರಾಣ ಮಂಗಲ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.



ಮನುಷ್ಯನಿಗೆ ಸದ್ಗುಣಗಳೇ ಶ್ರೀರಕ್ಷೆಯಾಗಿದ್ದು, ಜೀವನದ ಜಂಜಾಟಗಳ ನಡುವೆ ಸ್ವಲ್ಪ ಸಮಯವಾದರೂ ಧರ್ಮಕಾರ್ಯ, ಸಮಾಜ ಸೇವೆ ಮಾಡುವ ಮೂಲಕ ಜೀವನ್ಮುಕ್ತಿಯನ್ನು ಹೊಂದಬಹುದಾಗಿದೆ. ನಮ್ಮಲ್ಲಿನ ಕೋಪ-ತಾಪಗಳ ಶಮನವಾಗಿ ನೆಮ್ಮದಿಯ ಜೀವನ ಮತ್ತು ಪುಣ್ಯಪ್ರಾಪ್ತಿಗೆ ಪುರಾಣ ಪುಣ್ಯಕಥೆಗಳು ರಹದಾರಿಯಾಗಿವೆ ಎಂದ ಅವರು, ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ತ್ರಿಕೋಟಿ ಶಿವಲಿಂಗ ಸ್ಥಾಪನೆ ಪೂಜಾ ಕಾರ್ಯಕ್ರಮಕ್ಕೆ ನಾಡಿನ ಸಾವಿರಾರು ಭಕ್ತರು ಆಗಮಿಸಿ ಈ ಅಭೂತಪೂರ್ವ ಸಂದರ್ಭಕ್ಕೆ ಸಾಕ್ಷಿಯಾಗಿದ್ದರು. ಇನ್ನು ಒಂದು ವರ್ಷದೊಳಗಾಗಿ ಮುಕ್ತಿಮಂದಿರ ಧರ್ಮಕ್ಷೇತ್ರ ಸಂಪೂರ್ಣ ಚಿತ್ರಣವೇ ಬದಲಾಗಲಿದ್ದು, ನಾಡಿನ ಶ್ರೇಷ್ಠ ಧಾರ್ಮಿಕ ಸ್ಥಳಗಳಲ್ಲಿ ಒಂದಾಗಿ ಕಂಗೊಳಿಸಲಿದೆ ಎಂದು ನುಡಿದರು.

ಅತಿಥಿಗಳಾಗಿ ಆಗಮಿಸಿದ ಬಸವೇಶ್ವರ ಮಹಾಂತಶೆಟ್ಟರ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಬದುಕಿನುದ್ದಕ್ಕೂ ದೇವರು, ಧರ್ಮಕಾರ್ಯ, ದಾನ, ದಯೆ ಮತ್ತು ಮಾನವೀಯತೆಗಳನ್ನು ರೂಢಿಸಿಕೊಳ್ಳಬೇಕು. ನಮ್ಮ ಹಿರಿಯರು ತೋರಿದ ಸನ್ಮಾರ್ಗ, ಸಂಸ್ಕೃತಿ, ಆಚರಣೆ, ಸಂಪ್ರದಾಯಗಳನ್ನು ಮರೆಯಬಾರದು. ಧರ್ಮ ಕಾರ್ಯಗಳು, ಧರ್ಮಾಚರಣೆಗಳು ನಮ್ಮನ್ನು ಸನ್ಮಾರ್ಗದತ್ತ ಒಯ್ದು ಶಾಂತಿ, ನೆಮ್ಮದಿ, ಸಮೃದ್ಧಿ ಕೊಡುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸೋಮೇಶ್ವರ ಭಕ್ತ ಸೇವಾ ಟ್ರಸ್ಟ್ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಸುರೇಶ್ ರಾಚನಾಯ್ಕರ್, ಬಸವರಾಜ ಮೆಣಸಿನಕಾಯಿ, ಕುಬೇರಪ್ಪ ಮಹಾಂತಶೆಟ್ಟರ, ಕಾಶಪ್ಪ ಮುಳಗುಂದ, ನಂದೀಶ ಬಂಡಿವಾಡ, ಶಿವಪುತ್ರಪ್ಪ ಚಾಕಲಬ್ಬಿ, ಜಿ.ಜಿ ಹಾಲೇವಾಡಿಮಠ, ಎನ್.ಆರ್ ಸಾತಪೂತೆ, ಮುದಕಣ್ಣ ಗೊರವರ, ಜಯಪ್ರಕಾಶ ಹೊಟ್ಟಿ, ವಿರುಪಾಕ್ಷಪ್ಪ ಆದಿ, ಮಯೂರ ಪಾಟೀಲ, ಎಂ.ಕೆ ಕಳ್ಳಿಮಠ, ಪಾರ್ವತಿ ಕಳ್ಳಿಮಠ, ಪುರಾಣ ಪಠಣಗೈದ ವಿರುಪಾಕ್ಷ ಗವಾಯಿಗಳು, ಪ್ರವಚನ ನೀಡಿದ ಎಸ್.ಎಫ್ ಆದಿ, ಕಳಕಲ್ಲ ಮುದ್ನಾಪೂರ ಮುಂತಾದವರಿದ್ದರು. ಗಂಗಾಧರ ಗುಡಗೇರಿ, ಸ್ನೇಹಾ ಹೊಟ್ಟಿ ನಿರೂಪಿಸಿದರು.

> ಇಂದಿನ ತಾಂತ್ರಿಕ ಯುಗದಲ್ಲಿ ಟಿವ್ಹಿ, ಕಂಪ್ಯೂಟರ್, ಸಿನಿಮಾ ಮಾಧ್ಯಮಗಳ ಪ್ರಭಾವಕ್ಕೊಳಗಾದ ಮನುಷ್ಯ ಖಿನ್ನತೆಯಿಂದ ಬಳಲುತ್ತಾ, ನಮ್ಮ ಸಂಸ್ಕೃತಿ, ಆಚಾರ-ವಿಚಾರ, ಧರ್ಮಾಚರಣೆಗಳನ್ನು ಮರೆಯುತ್ತಿರುವುದು ವಿಷಾದದ ಸಂಗತಿಯಾಗಿದೆ. ಪ್ರತಿಯೊಬ್ಬ ಮನುಷ್ಯನೂ ತನ್ನ ಕರ್ತವ್ಯ ಕರ್ಮಾದಿಗಳನ್ನು ಅರಿತು, ಧರ್ಮದ ದಾರಿಯಲ್ಲಿ ನಡೆಯುವುದರ ಜೊತೆಗೆ ಮಕ್ಕಳಿಗೂ ಸಂಪ್ರದಾಯ, ಸಂಸ್ಕೃತಿ ಹಾಗೂ ಹಬ್ಬಗಳ ಆಚರಣೆಯ ಮಹತ್ವವನ್ನು ತಿಳಿಸಬೇಕು.
>
> **- ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ.**
>
> ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರು.

# ನಾಗದೇವರ ಮೂರ್ತಿ ಪ್ರತಿಷ್ಠಾಪನೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ನರಸಾಪೂರ ಗ್ರಾಮದ ಖಾದಿ ನಗರದ ಶ್ರೀ ವರಸಿದ್ಧಿ ವಿನಾಯಕನ ದೇವಸ್ಥಾನದ ಆವರಣದಲ್ಲಿ ನಾಗದೇವರ ಮೂರ್ತಿ ಪ್ರತಿಷ್ಠಾಪನೆ, ಬನ್ನಿವೃಕ್ಷ ಹಾಗೂ ಪತ್ರಿವೃಕ್ಷ ನೆಡುವ ಕಾರ್ಯಕ್ರಮ ಸೆ.17ರಂದು ಬೆಳಿಗ್ಗೆ 10ಕ್ಕೆ ನಡೆಯಲಿದೆ.

ಕಾರ್ಯಕ್ರಮದಲ್ಲಿ ಅಡೂರ-ರಾಜೂರ ಬೃಹನ್ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ ಅವರು ನೇತೃತ್ವ ವಹಿಸುವರು. ವೇದಮೂರ್ತಿ ಲಿಂಗಯ್ಯಶಾಸ್ತ್ರಿಗಳು ಹಿರೇಮಠ ಪಾಲ್ಗೊಳ್ಳುವರು. ನಂತರ ದೇವಸ್ಥಾನ ಅಭಿವೃದ್ಧಿಗೆ ಶ್ರಮಿಸಿದ ಮಹನೀಯರಿಗೆ ಸನ್ಮಾನ, ಮಧ್ಯಾಹ್ನ ಮಹಾಪ್ರಸಾದ ನೆರವೇರಲಿದೆ ಎಂದು ನಾಗರಿಕ ಹಿತರಕ್ಷಣಾ ಕಮೀಟಿಯ ಅಧ್ಯಕ್ಷರು, ಪದಾಧಿಕಾರಿಗಳು, ಸರ್ವ ಸದಸ್ಯರು ತಿಳಿಸಿದ್ದಾರೆ.



ಅದ್ದೂರಿಯಿಂದ ನೆರವೇರಿದ ನಾಗಮೂರ್ತಿ ಮೆರವಣಿಗೆ: ನರಸಾಪೂರ ಗ್ರಾಮದ ರಂಗಪ್ಪಜ್ಜನ ಮಠದಿಂದ ಖಾದಿ ನಗರದ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದವರೆಗೆ ನಾಗದೇವರ ಮೂರ್ತಿಯ ಮೆರವಣಿಗೆ ಶುಕ್ರವಾರ ಅದ್ದೂರಿಯಿಂದ ಜರುಗಿತು.

ಮಹಿಳೆಯರು ಆರತಿ ಹಿಡಿದು, ಭಜನೆ ಮಾಡುತ್ತ ಮೆರವಣಿಗೆಗೆ ಮೆರುಗು ನೀಡಿದರು. ನಾಗರಿಕ ಹಿತರಕ್ಷಣಾ ಕಮಿಟಿಯ ಅಧ್ಯಕ್ಷ ಕೆ.ಎಸ್ ಹಿರೇಮಠ, ಉಪಾಧ್ಯಕ್ಷ ಎಸ್.ವಿ ಗುರ್ಲಹೊಸೂರ, ಕಾರ್ಯದರ್ಶಿ ಸಿ.ವಿ ಪವಾಡಶೆಟ್ಟರ, ಮಹದೇವಪ್ಪ ಶಿರೋಳ ಸೇರಿ ಕಮಿಟಿಯ ಪದಾಧಿಕಾರಿಗಳು, ಸರ್ವ ಸದಸ್ಯರು ಹಾಗೂ ಮಹಿಳೆಯರು ಇದ್ದರು.

# ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಕಂಚಿನ ಪದಕ

■ವಿಜಯಸಾಕ್ಷಿ ಸುದ್ದಿ, ಗದಗ

ಬ್ಯಾಂಕಾಂಗ್‌ನ ಕ್ಯಾಪಿಟಲ್ ಸಿಟಿ ಥೈಲ್ಯಾಂಡ್‌ನಲ್ಲಿ ಇತ್ತೀಚೆಗೆ ನಡೆದ ಏಶಿಯಾ ಪೆಸಿಫಿಕ್ ಅಂತಾರಾಷ್ಟ್ರೀಯ ಯೋಗ ಸ್ಪೋರ್ಟ್ಸ್ ಛಾಂಪಿಯನ್‌ಶಿಪ್‌ನಲ್ಲಿ ಭಾರತದ ಪರವಾಗಿ ಗದಗ ಜಿಲ್ಲಾ ಮುಳಗುಂದ ಪಟ್ಟಣದ ನಮಿತಾ ಗುರಮ್ಮನವರ ಭಾಗವಹಿಸಿ, ಕಂಚಿನ ಪದಕ ಗಳಿಸಿ ಗದಗ ಜಿಲ್ಲೆಗೆ ಕೀರ್ತಿ ತಂದಿದ್ದಾಳೆ.

ಈಕೆಗೆ ಪತಂಜಲಿ ಯೋಗ ಸಮಿತಿಯ ಕರ್ನಾಟಕ ರಾಜ್ಯ ಪ್ರಭಾರಿಗಳು ಹಾಗೂ ಯೋಗಗುರು ಭವರಲಾಲ್ ಆರ್ಯಜಿ, ರಾಜ್ಯ ಸಮಿತಿ ಸದಸ್ಯರು ಗದಗ, ಕೊಪ್ಪಳ, ವಿಜಯನಗರ ಜಿಲ್ಲಾ ಉಸ್ತುವಾರಿಗಳಾದ ಗಂಗಾವತಿಯ ಡಾ. ಎಸ್.ಬಿ ಹಂದ್ರಾಳ, ಭಾರತ ಸ್ವಾಭಿಮಾನ ಟ್ರಸ್ಟ್ ಜಿಲ್ಲಾ ಪ್ರಭಾರಿಗಳಾದ ರುದ್ರಣ್ಣ ಗುಳಗುಳೆ, ಮಹಿಳಾ ಪತಂಜಲಿ ಯೋಗ ಸಮಿತಿ ಜಿಲ್ಲಾ ಪ್ರಭಾರಿಗಳಾದ ಶೋಭಾ ಗುಗ್ಗರಿ, ಕಾರ್ಯದರ್ಶಿ ನಾಗರತ್ನಾ ಬಡಿಗಣ್ಣವರ ಹಾಗೂ ಎಲ್ಲ ಹಿರಿಯ ಯೋಗ ಸಾಧಕರು ಅಭಿನಂದನೆಗಳನ್ನು ತಿಳಿಸಿದ್ದಾರೆ.



# ಭಜನಾ ಮುಕ್ತಾಯ ಸಮಾರಂಭ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ತಾಲೂಕಿನ ಜಂತಲಿ ಶಿರೂರ ಗ್ರಾಮದಲ್ಲಿ ಶ್ರೀ ಮಂಜುನಾಥ ಭಜನಾ ಸಂಘದ ವತಿಯಿಂದ ಭಜನಾ ಮುಕ್ತಾಯ ಸಮಾರಂಭ ಜರುಗಿತು.

ಗ್ರಾಮದಲ್ಲಿ ಶ್ರಾವಣ ಮಾಸದ ಅಂಗವಾಗಿ ಒಂದು ತಿಂಗಳ ಪರ್ಯಂತ ಬೆಳಗಿನ ಜಾವ ಭಜನೆ ಮಾಡುವ ಮುಖಾಂತರ ಅಮಾವಾಸ್ಯೆ ರಾತ್ರಿ ಶ್ರೀ ಕನಕಮ್ಮ ದೇವಿ ಪಲ್ಲಕ್ಕಿ ಉತ್ಸವ ಮತ್ತು ಅಮಾವಾಸ್ಯೆ ಪಾಡ್ಯದಂದು ಮುಕ್ತಾಯಗೊಳಿಸಲಾಯಿತು.

ಬೆಳಗ್ಗೆ 10.30ಕ್ಕೆ ಪ್ರಾರಂಭಗೊಂಡ ಭಜನಾ ಮುಕ್ತಾಯ ಸಮಾರಂಭ ಶಿರೂರ ಗ್ರಾಮದ ಪ್ರಮುಖ ಬೀದಿಗಳಲ್ಲಿ ತೇರಿನ ಮುಖಾಂತರ ಸಂಚರಿಸಿ ಸಂಜೆ 7ಕ್ಕೆ ಶ್ರೀ ಕನಕಮ್ಮ ದೇವಿ ದೇವಸ್ಥಾನ ತಲುಪಿತು. ನಂತರ ಮಹಾಪ್ರಸಾದ ಜರಗಿತು.

ಎಲ್ಲಾ ಕಾರ್ಯಕ್ರಮದಲ್ಲಿ ಶ್ರೀ ಮಂಜುನಾಥ ಭಜನಾ ಸಂಘದ ಯುವಕರು, ಗುರು-ಹಿರಿಯರು ಮತ್ತು ಮಹಿಳೆಯರು ಪಾಲ್ಗೊಂಡಿದ್ದರು.



# ಸಿಡಿಪಿಒ, ಎಫ್‌ಡಿಸಿ ಲೋಕಾಯುಕ್ತ ಬಲೆಗೆ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಗುತ್ತಿಗೆದಾರರೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಒ) ಹಾಗೂ ದ್ವಿತೀಯ ದರ್ಜೆ ಸಹಾಯಕ ಬಲೆಗೆ ಬಿದ್ದಿದ್ದಾರೆ.

ರೋಣ ಮತ್ತು ಗಜೇಂದ್ರಗಡದ ಸಿಡಿಪಿಒ ಬಸಮ್ಮ ಹೂಲಿ ಮತ್ತು ದ್ವಿತೀಯ ದರ್ಜೆ ಸಹಾಯಕ ಜಗದೀಶ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳು.

ಗುತ್ತಿಗೆದಾರ ಅನಿಲ ದೊಡ್ಡಿ ಎನ್ನುವವರು ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ವಿಚಾರಣೆ ನಡೆಸುತ್ತಿದ್ದಾರೆ.

ಪಟ್ಟಣದ ಹೊರವಲಯದ ಡಾಬಾವೊಂದರಲ್ಲಿ ಈ ದಾಳಿ ನಡೆದಿದೆ. ಕಳೆದ ವರ್ಷ ಅಂಗನವಾಡಿಗೆ ಆಹಾರ ಪೂರೈಕೆ ಮಾಡಿದ್ದ ಬಿಲ್‌ಗಾಗಿ ಸಿಡಿಪಿಒ ಮತ್ತು ಎಫ್ ಡಿಸಿ 1.6 ಲಕ್ಷ ರೂ. ಬೇಡಿಕೆ ಇಟ್ಟಿದ್ದರು.

ಈ ವಿಷಯವನ್ನು ಗುತ್ತಿಗೆದಾರ ಅನಿಲ ಲೋಕಾಯುಕ್ತರ ಗಮನಕ್ಕೆ ತಂದಿದ್ದರು. ಶನಿವಾರ ಡಾಬಾದಲ್ಲಿ 1.5 ಲಕ್ಷ ರೂ. ನಗದು ಕೊಡುವಾಗ ಲೋಕಾಯುಕ್ತರು ದಾಳಿ ನಡೆಸಿ ಅಧಿಕಾರಿಗಳನ್ನು ವಶಕ್ಕೆ ಪಡೆದಿದ್ದಾರೆ.

ಲೋಕಾಯುಕ್ತ ಡಿವೈಎಸ್ಪಿ ಶಂಕರ ರಾಗಿ, ಸಿಪಿಐ ರವಿ ಪುರುಷೋತ್ತಮ ನೇತೃತ್ವದಲ್ಲಿ ಸಿಬ್ಬಂದಿ ದಾಳಿ ನಡೆಸಿದ್ದಾರೆ.

# ವಿಜೃಂಭಣೆಯ ವೀರಭದ್ರೇಶ್ವರ ರಥೋತ್ಸವ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ವೀರಭದ್ರೇಶ್ವರ ಜಾತ್ರಾ ಮಹೋತ್ಸವವು ಶುಕ್ರವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಸ್ತೆಯ ಇಕ್ಕೆಲಗಳಲ್ಲಿ, ಮನೆ ಮುಂದೆ, ಮಹಡಿ ಮೇಲೆ ಮಹಿಳೆಯರು, ಮಕ್ಕಳು ಸೇರಿದಂತೆ ಓಣಿಯ ಭಕ್ತರು ನಿಂತು ರಥೋತ್ಸವವನ್ನು ಕಣ್ತುಂಬಿಕೊಂಡರು. ರಥಕ್ಕೆ ಉತ್ತತ್ತಿ ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವವು ಭಜನೆ, ಝಾಂಜಮೇಳ, ಡೊಳ್ಳು, ಸಕಲ ವಾದ್ಯ ವೈಭವದೊಂದಿಗೆ ವೀರಭದ್ರೇಶ್ವರ ದೇವಸ್ಥಾನದಿಂದ ಪ್ರಾರಂಭವಾಗಿ ಗಣೇಶ ದೇವಸ್ಥಾನದ ಮೂಲಕ ವೀರಣ್ಣನ ಪಾದಗಟ್ಟಿ ತಲುಪಿ ಮರಳಿ ಮೂಲ ಸ್ಥಾನಕ್ಕೆ ಬಂದು ತಲುಪಿತು.

ರಥೋತ್ಸವದಲ್ಲಿ ನರೇಗಲ್ಲ ಸೇರಿದಂತೆ ಕೊಡಿಕೊಪ್ಪ, ತೋಟಗಂಟಿ, ಮಲ್ಲಾಪುರ, ದ್ಯಾಂಪುರ, ಕೊಚಲಾಪೂರ ಗ್ರಾಮದ ಭಕ್ತರು ಪಾಲ್ಗೊಂಡಿದ್ದರು.

# ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಸಚಿವ ಎಚ್.ಕೆ.ಪಾಟೀಲ





■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಶನಿವಾರ ಸಾಯಂಕಾಲ ನಗರದ ಕಾಟನ್ ಸೇಲ್ ಸೊಸೈಟಿಯಲ್ಲಿನ ತಮ್ಮ ಕಾರ್ಯಾಲಯದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಸಾರ್ವಜನಿಕರಿಂದ ಶಾಂತ ಚಿತ್ತದಿಂದಲೇ ಅಹವಾಲುಗಳನ್ನು ಸ್ವೀಕರಿಸಿದ ಸಚಿವರು, ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಕೂಡಲೇ ಸಮಸ್ಯೆ ಪರಿಹಾರಕ್ಕಾಗಿ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು.

ಸಾರ್ವಜನಿಕರು ಅನಾರೋಗ್ಯ, ಶಸ್ತ್ರಚಿಕಿತ್ಸೆ ಸಹಾಯ ಕೋರಿ ಅಹವಾಲು ತೋಡಿಕೊಂಡರು. ಇದಕ್ಕೆ ಸ್ಪಂದಿಸಿದ ಸಚಿವ ಎಚ್ ಕೆ ಪಾಟೀಲ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ನೀಡುವ ಕುರಿತು ಭರವಸೆ ನೀಡಿದರು.

ಸಾರ್ವಜನಿಕರಿಂದ ಸಾಮೂಹಿಕ ಹಾಗೂ ವೈಯಕ್ತಿಕ ಅಹವಾಲುಗಳನ್ನು ಸ್ವೀಕರಿಸಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ತಕ್ಷಣ ಪರಿಹಾರ ಮಾಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ತಹಸೀಲ್ದಾರ ಶ್ರೀನಿವಾಸ ಮೂರ್ತಿ ಕುಲಕರ್ಣಿ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು, ಗಣ್ಯರು ಹಾಜರಿದ್ದರು.




ಕರ್ನಾಟಕ ಸರ್ಕಾರ

**ಗ್ರಾಮ ಪಂಚಾಯತ ಕಾರ್ಯಾಲಯ ಇಟಗಿ**

ತಾ : ಶಿರಹಟ್ಟಿ ಜಿ : ಗದಗ

Email : itigi.shi.gdg@gmai.com Phone : 9731471101

ಗ್ರಾ.ಪಂ/ಹಾ/ಟೆಂಡರ್/2023-24 ದಿನಾಂಕ : 16/09/2023

**ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ ನಿಯಮಗಳನ್ವಯ ಅರ್ಹ ಗುತ್ತಿಗೆದಾರ/ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ **0.1** ಕಾಮಗಾರಿಯ ಗುಣಮಟ್ಟದ ಸಾಮಗ್ರಿ ಪೂರೈಕೆಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2022-23ನೇ ಸಾಲಿನ **MGNREGA** ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರ/ಸರಬರಾಜುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **https://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆಗಳು ಈ ಕೆಳಗಿನಂತೆ ಇರುತ್ತವೆ.

1) INDENT NO : RDPR/2023-24/IND0141 ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. : Rs: **755841=00**

**ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ** : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ, ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಹಾಗೂ ಶ್ರೆಡ್ಯೂಲ್-ಬಿ ಯನ್ನು ವೇಬ್ ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **19/09/2023** ರಿಂದ **27/09/2023** ರ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ : **29/09/2023** ರಂದು 16.30 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯು ಕೆಲಸದ ವೇಳೆಯಲ್ಲಿ ಪಡೆಯಬಹುದು.

**ಸಹಿ/- ಪಂಚಾಯತ ಅಭಿವೃದ್ಧಿ ಅಧಿಕಾರಿ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/182/2023-24 **ಗ್ರಾಮ ಪಂಚಾಯತ ಇಟಗಿ**

ತಹಸೀಲ್ದಾರ್ ಕಾರ್ಯಾಲಯದಲ್ಲಿ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮ

# ಸಂವಿಧಾನದ ಆಶಯಗಳಿಗೆ ತಕ್ಕಂತೆ ನಡೆಯೋಣ



**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಪ್ರತಿಯೊಬ್ಬರೂ ಸಂವಿಧಾನದ ಆಶಯಗಳನ್ನು ತಿಳಿದುಕೊಂಡು ಸಂವಿಧಾನಬದ್ಧವಾಗಿ ನಡೆದುಕೊಳ್ಳಲು ಮುಂದಾಗಬೇಕು ಎಂದು ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಹೇಳಿದರು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆಯಲ್ಲಿ ಶುಕ್ರವಾರ ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದಲ್ಲಿ ನಡೆದ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದ ಸಂವಿಧಾನದ ಆಶಯಗಳಿಗೆ ನಾವೆಲ್ಲರೂ ಬದ್ಧರಾಗಿ ಜೀವನ ನಡೆಸಬೇಕಿದೆ. ಸಂವಿಧಾನ ಪೀಠಿಕೆ ಓದುವುದು ಒಂದು ದಿನಕ್ಕೆ ಮಾತ್ರ ಸೀಮಿತ ಮಾಡಿಕೊಳ್ಳದೆ ಪ್ರತಿದಿನ ನಾವು ಸಂವಿಧಾನ ಓದಲು ಮುಂದಾಗುವ ಮೂಲಕ ಸಂವಿಧಾನದ ಆಶಯಗಳಿಗೆ ತಕ್ಕಂತೆ ನಡೆದುಕೊಂಡು, ಸಂವಿಧಾನಬದ್ಧ ಹಕ್ಕುಗಳನ್ನು ಪಡೆಯಬೇಕಿದೆ ಎಂದರು.

ಮುಖಂಡರಾದ ಶಿವರಾಜ ಘೋರ್ಪಡೆ, ಶರಣು ಪೂಜಾರ, ಉಮೇಶ ರಾಠೋಡ, ರಾಜು ಸಾಂಗ್ಲೀಕರ ಮಾತನಾಡಿದರು. ಉಪ ನೋಂದಣಾಧಿಕಾರಿ ವೀರೂಪಾಕ್ಷಯ್ಯ ಚೌಕಿಮಠ, ಪುರಸಭೆ ಹಂಗಾಮಿ ಅಧ್ಯಕ್ಷ ವೀರಪ್ಪ ಪಟ್ಟಣಶೆಟ್ಟಿ, ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ, ಪುರಸಭೆ ಸದಸ್ಯರಾದ ರೂಪೇಶ ರಾಠೋಡ, ಸುಭಾಸ ಮ್ಯಾಗೇರಿ, ಯು.ಆರ್ ಚನ್ನಮ್ಮನವರ, ವೆಂಕಟೇಶ ಮುದಗಲ್, ಯಮನಪ್ಪ ತಿರಕೋಜಿ, ಕಸಾಪ ಅಧ್ಯಕ್ಷ ಅಮರೇಶ ಗಾಣಿಗೇರ, ಮುಖಂಡರಾದ ಶ್ರೀಧರ ಬಿದರಳ್ಳಿ, ಎ.ಡಿ ಕೋಲಕಾರ, ಯಲ್ಲಪ್ಪ ಬಂಕದ, ಸಮಾಜ ಕಲ್ಯಾಣ ಇಲಾಖೆಯ ಗೀತಾ ಆಲೂರ, ಸಂಗಮೇಶ ಅಡಗತ್ತಿ ಸೇರಿ ಇತರರು ಇದ್ದರು.

ಪಟ್ಟಣದ ಪುರಸಭೆ ಸಭಾ ಭವನದಲ್ಲಿ ಪುರಸಭೆ ಹಂಗಾಮಿ ಅಧ್ಯಕ್ಷ ವೀರಪ್ಪ ಪಟ್ಟಣಶೆಟ್ಟಿ, ಸದಸ್ಯರು ಹಾಗೂ ಅಧಿಕಾರಿಗಳು, ಕೆಎಸ್ಎಸ್ ಪಿ.ಯು ಕಾಲೇಜು, ಜಗದ್ಗುರು ತೋಂಟದಾರ್ಯ ಪಿ.ಯು ಕಾಲೇಜು, ತುಳಜಾಭವಾನಿ ಕಿರಿಯ ಪ್ರಾಥಮಿಕ ಶಾಲೆ, ಎಸ್.ಎಂ ಭೂಮರಡ್ಡಿ ಪದವಿ ಕಾಲೇಜು ಸೇರಿದಂತೆ ರಾಜೂರ, ಸೂಡಿ, ರಾಂಪೂರ, ಗೋಗೇರಿ, ಕುಂಟೋಜಿ, ಲಕ್ಕಲಕಟ್ಟಿ ಗ್ರಾಮಗಳಲ್ಲಿ ಗ್ರಾ.ಪಂನಿಂದ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮ ನಡೆಯಿತು.

ಗೊಜನೂರು ಗ್ರಾಮದ ಆಶ್ರಯ ನಿವಾಸಿಗಳ ಹೋರಾಟಕ್ಕೆ ಕೊನೆಗೂ ಸಿಕ್ಕ ಜಯ

# ಫಲಾನುಭವಿಗಳಿಗೆ ಆಶ್ರಯ ನಿವೇಶನಗಳ ಹಕ್ಕುಪತ್ರ ವಿತರಣೆ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಮೀಪದ ಗೊಜನೂರು ಗ್ರಾಮದಲ್ಲಿ ಮೂರು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಆಶ್ರಯ ನಿವೇಶನಗಳ ಹಕ್ಕು ಪತ್ರ ವಿತರಣೆ ಕೊನೆಗೂ ಮುಕ್ತಿ ದೊರಕಿದಂತಾಗಿದ್ದು, ಪಟ್ಟಾ ಬುಕ್ ವಿತರಣೆಗೆ ಅಲ್ಲಿನ ನಿವಾಸಿಗಳು ನಡೆಸುತ್ತಿದ್ದ ನಿರಂತರ ಹೋರಾಟಕ್ಕೆ ತಾರ್ಕಿಕ ಅಂತ್ಯ ದೊರೆತಿದೆ. ಇದುವರೆಗೂ ಇದ್ದ ಅಡ್ಡಿ-ಆತಂಕಗಳು ದೂರವಾಗಿದ್ದು ಜನಪ್ರತಿನಿಧಿಗಳು, ಅಧಿಕಾರಿಗಳ ವಿಶೇಷ ಕಾಳಜಿಯಿಂದ ಅಲ್ಲಿನ ನಿವಾಸಿಗರ ಹೋರಾಟಕ್ಕೆ ಜಯ ದೊರಕಿದೆ. ಈ ಹಿನ್ನೆಲೆಯಲ್ಲಿ ಶನಿವಾರ ಅರ್ಹ ಫಲಾನುಭವಿಗಳಿಗೆ ಪಟ್ಟಾ ಬುಕ್ ವಿತರಣೆ ಮತ್ತು ಅಭಿನಂದನಾ ಸಮಾರಂಭ ನೆರವೇರಿತು.

ಗ್ರಾಮದಲ್ಲಿ ಶನಿವಾರ 168 ಜನರಿಗೆ ಆಶ್ರಯ ನಿವೇಶನಗಳ ಹಕ್ಕುಪತ್ರ ವಿತರಣೆ ಮಾಡಿದ ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ಆಶ್ರಯ ನಿವೇಶನಗಳ ಹಕ್ಕು ಪತ್ರ ದೊರೆಯವಂತಾಗಲು ಅಧಿಕಾರಿಗಳು ಹಾಗೂ ಗ್ರಾ.ಪಂ ಆಡಳಿತ ಮಂಡಳಿಯ ಶ್ರಮ ನಿಜಕ್ಕೂ ಪ್ರಶಂಸನೀಯ. ಸ್ವಂತ ನಿವೇಶನ ಹೊಂದಬೇಕು ಎನ್ನುವುದು ಪ್ರತಿಯೊಬ್ಬ ಬಡವನ ಕನಸಾಗಿದೆ. ಕಳೆದ 25 ವರ್ಷಗಳಿಂದ ನಿವೇಶನ ಹೊಂದುವ ಕನಸು ಹೊತ್ತು ಆಸೆ ಕಣ್ಣಿಂದ ನೋಡುತ್ತಿದ್ದ ನಿವೇಶನ ರಹಿತರ ಆ ಕನಸನ್ನು ತಹಸೀಲ್ದಾರ ಆನಂದ ಶೀಲ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಸಾಕಷ್ಟು ಶ್ರಮವಹಿಸುವ ಮೂಲಕ ಗೊಜನೂರು ಗ್ರಾಮದ 168 ಜನರಿಗೆ ಆಶ್ರಯ ನಿವೇಶನಗಳ ಹಕ್ಕುಪತ್ರ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

> ಅಧಿಕಾರಿಗಳಲ್ಲಿ ಜನಪರ ಕಾಳಜಿ ಹಾಗೂ ಒಂದಿಷ್ಟು ಮಾನವೀಯತೆ ಇದ್ದರೆ, ಸಾಮಾಜದ ಜನರ ಕಣ್ಣೀರು ಒರೆಸುವ ಕೆಲಸ ಮಾಡಲು ನಮ್ಮಿಂದ ಸಾಧ್ಯವೆಂಬುದನ್ನು ಅಧಿಕಾರಿಗಳು ಮಾಡಿ ತೋರಿಸಿದ್ದಾರೆ. ಮುಂದಿನ ದಿನಗಳಲ್ಲಿ ನಿವೇಶನ ರಹಿತರಿಗೆ ಆಶ್ರಯ ನಿವೇಶನ ನೀಡುವ ಬಗ್ಗೆ ವಿಶೇಷ ಕಾಳಜಿಯಿಂದ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡಿ ಅವರಿಗೂ ಸಹ ನಿವೇಶನ ದೊರಕಿಸುವ ಭರವಸೆ ನೀಡುತ್ತೇನೆ.
>
> **– ಡಾ. ಚಂದ್ರು ಲಮಾಣಿ,** ಶಾಸಕರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶಿರಹಟ್ಟಿಯ ಫಕ್ಕೀರ ದಿಂಗಾಲೇಶ್ವರ ಸ್ವಾಮಿಗಳು ಮಾತನಾಡಿ, ಸಾರ್ವಜನಿಕರ ಸಮಸ್ಯೆಗಳನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿ, ಅವುಗಳನ್ನು ಹೇಗೆ ಬಗೆಹರಿಸಲು ಸಾಧ್ಯವೆಂಬುದನ್ನು ಅರಿತುಕೊಂಡು ಕಾರ್ಯ ನಿರ್ವಹಿಸುವುದು ಅಗತ್ಯವಾಗಿದೆ. ಸುಮಾರು 25 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಕ್ಕುಪತ್ರ ವಿತರಣೆಯನ್ನು ಕೆಲವೇ ದಿನಗಳಲ್ಲಿ ನಿರ್ವಹಿಸಿದ ತಹಸೀಲ್ದಾರ ಆನಂದ ಶೀಲ್ ಮತ್ತು ಮುತುವರ್ಜಿ ವಹಿಸಿದ ಶಾಸಕ ಡಾ.ಚಂದ್ರು ಅವರ ಶ್ರಮ ಸಾರ್ಥಕವಾಗಿದೆ ಎಂದು ಹೇಳಿದರು. ಸಭೆಯಲ್ಲಿ ತಹಸೀಲ್ದಾರ ಆನಂದ ಶೀಲ್, ಗ್ರಾ.ಪಂ ಸದಸ್ಯ ಮಂಜುನಾಥ ಚಲವಾದಿ ಹಾಗೂ ಗ್ರಾ.ಪಂ ಮಾಜಿ ಸದಸ್ಯ ಎಸ್.ಡಿ ಪಾಟೀಲ ಮಾತನಾಡಿದರು. ಗ್ರಾ.ಪಂ ಅಧ್ಯಕ್ಷೆ ನೀಲವ್ವ ಮಾದರ, ಉಪಾಧ್ಯಕ್ಷ ಮಹಾಂತಗೌಡ ಪಾಟೀಲ, ಸದಸ್ಯರಾದ ನೀಲವ್ವ ಪಾಟೀಲ, ಸುಶೀಲವ್ವ ತಳವಾರ, ನೀಲಪ್ಪ ಗುಡ್ಡಣ್ಣವರ, ಗಂಗಾಧರ ಕರಿನಿಂಗಣ್ಣವರ, ದ್ಯಾಮವ್ವ ಮೆಣಸಿನಕಾಯಿ, ಫಾತಿಮಾ ಮುಲ್ಲಾನವರ, ಗೀತಾ ಮುರದ, ಪುಟ್ಟವ್ವ ಲಮಾಣಿ, ಚಿನ್ನಕ್ಕ ಲಮಾಣಿ, ಮಹಾಂತಪ್ಪ ಹರಿಜನ, ಪಿಡಿಓ ಶಿವಾನಂದ ಮಾಳವಾಡ, ಹೋರಾಟಗಾರ ಚೇತನ ಕಣವಿ, ಶಂಭು ಸೊರಟೂರ, ರಮೇಶ ದನದಮನಿ, ಸಿ.ಡಿ ಪಾಟೀಲ, ಚನ್ನಪ್ಪ ಷಣ್ಮುಖಿ, ಹನಮಂತಗೌಡ ಪಾಟೀಲ ಇದ್ದರು.

# ಪೊಲೀಸರ ಬಗ್ಗೆ ಭಯ ಬೇಡ: ಅಶೋಕ ಹೊಸಳ್ಳಿ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪೊಲೀಸರೆಂದರೆ ನಿಮ್ಮನ್ನು ಹೆದರಿಸುವವರಲ್ಲ. ಅವರೂ ನಿಮ್ಮ ಹಾಗೆ ಮನುಷ್ಯರು. ಅವರಿಗೂ ನಿಮಗಿರುವಂತೆ ಸಂಬಂಧಗಳಿವೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ನಮಗೆ ಒಂದಿಷ್ಟು ಹೆಚ್ಚಿನ ಜವಾಬ್ದಾರಿಗಳನ್ನು ನೀಡಿರುತ್ತಾರೆ. ಅವುಗಳನ್ನು ಜಾರಿಗೊಳಿಸುವಾಗ ಒಂದಿಷ್ಟು ಕಠಿಣತೆಯಿಂದ ನಾವು ನಡೆದುಕೊಳ್ಳಬೇಕಾಗುತ್ತದೆ. ಹಾಗೆಂದು ನಾವು ಅನಾವಶ್ಯಕವಾಗಿ ಯಾರನ್ನೂ ಹೆದರಿಸುವುದಿಲ್ಲ. ನೀವ್ಯಾರೂ ಪೊಲೀಸರ ಬಗ್ಗೆ ಭಯ ಇಟ್ಟುಕೊಳ್ಳಬೇಡಿ ಎಂದು ನರೇಗಲ್ಲ ಪೊಲೀಸ್ ಠಾಣಾ ಹವಾಲ್ದಾರ ಅಶೋಕ ಹೊಸಳ್ಳಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ತೆರೆದ ಮನೆ ಕಾರ್ಯಕ್ರಮದಡಿಯಲ್ಲಿ ಇಲ್ಲಿನ ಕೆಜಿಎಸ್ ಶಾಲೆಯ ಮಕ್ಕಳು ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಠಾಣೆಯಲ್ಲಿ ನಿತ್ಯವೂ ನಡೆಯುವ ಕಾರ್ಯಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಹೊಸಳ್ಳಿ ಮಾತನಾಡಿದರು.

ಯಾರಿಂದಲಾದರೂ ಏನಾದರೂ ತೊಂದರೆಯಾದರೆ ಠಾಣೆಗೆ ಬಂದು ದೂರನ್ನು ಹೇಗೆ ಕೊಡಬೇಕು, ಠಾಣೆಯಲ್ಲಿ ವಿವಿಧ ವಿಷಯಗಳ ದಾಖಲೀಕರಣ ಹೇಗೆ, ಸಾರ್ವಜನಿಕರೊಂದಿಗೆ ಠಾಣೆಯಲ್ಲಿನ ಸಿಬ್ಬಂದಿ ಹೇಗೆ ವ್ಯವಹರಿಸುತ್ತಾರೆ, ಸಾರ್ವಜನಿಕರು ಠಾಣಾಧಿಕಾರಿಗಳು ಮತ್ತು ಸಿಬ್ಬಂದಿಯವರೊಂದಿಗೆ ಹೇಗೆ ವರ್ತಿಸಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ವಿವರಣೆಯನ್ನು ಮಕ್ಕಳಿಗೆ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯ ಬಿ.ಬಿ ಕುರಿ, ಶಿಕ್ಷಕರಾದ ಎನ್.ಎಲ್ ಚವ್ಹಾಣ, ಎಸ್.ಎಚ್ ಹಾದಿಮನಿ, ಡಿ.ವಿ ಕಳ್ಳಿ, ಎಂ.ಎಸ್ ಮಾಳಶೆಟ್ಟಿ ಮುಂತಾದವರಿದ್ದರು.

# ಹರ್ಲಾಪೂರದಲ್ಲಿ ಶಿವಾನುಭವ ಗೋಷ್ಠಿ



**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಸಮೀಪದ ಹರ್ಲಾಪೂರ ಗ್ರಾಮದ ಕೊಟ್ಟೂರೇಶ್ವರ ಮಠದಲ್ಲಿ 284ನೇ ಶಿಕ್ಷಕರ ದಿನಾಚರಣೆಯ ಶಿವಾನುಭವ ಗೋಷ್ಠಿ ಜರುಗಿತು.

ಸಾನ್ನಿಧ್ಯ ವಹಿಸಿದ್ದ ಡಾ. ಕೊಟ್ಟೂರೇಶ್ವರ ಶ್ರೀಗಳು ಸರ್ವಪಲ್ಲಿ ಡಾ ರಾಧಾಕೃಷ್ಣನ್ ಅವರ ವ್ಯಕ್ತಿತ್ವ ಮತ್ತು ಸಾಧನೆ, ಗುರಿ ಬಗ್ಗೆ ಮಾತನಾಡುತ್ತಾ, ಶಿಕ್ಷಕರು ಮತ್ತು ಮಕ್ಕಳು ಅವಿನಾಭಾವ ಸಂಬಂಧವನ್ನು ಬೆಳೆಸಿಕೊಂಡಾಗ ಮಾತ್ರ ಶಿಕ್ಷಣದ ಅಭಿವೃದ್ಧಿ ಸಾಧ್ಯ. ತಂದೆ-ತಾಯಿಗಳು ತಮ್ಮ ಮಕ್ಕಳ ಶಿಕ್ಷಣದ ಕುರಿತು ಹೆಚ್ಚು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಅವರಿಗಾಗಿ ಆಸ್ತಿ ಮಾಡುವುದು ಬೇಡ, ಅವರನ್ನೇ ಆಸ್ತಿಯನ್ನಾಗಿ ಮಾಡಿದಾಗ ಮಾತ್ರ ಈ ದೇಶವು ಸಹ ಅಭಿವೃದ್ಧಿಯಾಗುತ್ತದೆ ಎಂದು ಸಲಹೆ ನೀಡಿದರು.

ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಡಿ.ಟಿ ಮೆಹರವಾಡೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಿವೃತ್ತ ಶಿಕ್ಷಕ ಸಿ.ಆರ್ ಪಟ್ಟೇದ ಉಪಸ್ಥಿತರಿದ್ದರು. ಕೆ.ಬಿ ವೀರಾಪೂರ ಹಾಗೂ ನಾಗೇಂದ್ರ ಅರ್ಕಸಾಲಿ ಅವರು ಸಂಗೀತ ಸೇವೆ ನೀಡಿದರು. ಮುಖ್ಯೋಪಾಧ್ಯಾಯ ಕೆ.ಬಿ ಕೊಣ್ಣೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಶಿಕ್ಷಕ ರಾಮಣ್ಣ ಬೆಳಧಡಿ ಸ್ವಾಗತಿಸಿದರು. ವೆಂಕಟೇಶ ಜುಂಜಣ್ಣೆ ನಿರೂಪಿಸಿ ವಂದಿಸಿದರು.

# ಗಾಂಜಾ ಬೆಳೆಸಿದ್ದ ಆರೋಪಿಗೆ ಶಿಕ್ಷೆ ಪ್ರಕಟ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಹಿರೇಹಂದಿಗೋಳ ಗ್ರಾಮದ ತನ್ನ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಸಿದ್ದ ಆರೋಪಿ ವೀರಪ್ಪ ಫಕ್ಕೀರಪ್ಪ ಕಲಗುಡಿ ಈತನ ಮೇಲೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯವು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಈತ ಸಾಗುವಳಿ ಮಾಡುತ್ತಿದ್ದ ಜಮೀನಿನಲ್ಲಿ ಉಳ್ಳಾಗಡ್ಡಿ ಹಾಗೂ ಮೆಣಸಿನಕಾಯಿ ಗಿಡಗಳ ನಡುವೆ ಅಲ್ಲಲ್ಲಿ ಸಣ್ಣ ಹಾಗೂ ದೊಡ್ಡ ಗಾತ್ರದ ಒಟ್ಟೂ 50 ಗಾಂಜಾ ಗಿಡಗಳನ್ನು ಬೆಳೆಸಿದ್ದು, ದಿ. 19.10.2016ರಂದು ಒಟ್ಟೂ 23 ಕೆಜಿ 450 ಗ್ರಾಂ ಗಾಂಜಾದೊಂದಿಗೆ ಸಿಕ್ಕುಬಿದ್ದಿದ್ದನು.

ಸದರಿ ಅಪರಾಧದ ಕುರಿತು ಆರೋಪಿತನ ವಿರುದ್ಧ ಗದಗ ಗ್ರಾಮೀಣ ವೃತ್ತದ ವೃತ್ತ ಆರಕ್ಷಕ ನಿರೀಕ್ಷಕ ಸೋಮಶೇಖರ ಗೋವಿಂದಪ್ಪ ಜುಟ್ಟಲ ತನಿಖೆ ಪೂರೈಸಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದುಗಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ್ವರ ಎಸ್.ಶೆಟ್ಟಿ ಇವರು ಪ್ರಕರಣದಲ್ಲಿ ಆರೋಪ ರುಜುವಾತಾದ ಹಿನ್ನೆಲೆಯಲ್ಲಿ ಅಪರಾಧಿಗೆ ಕಲಂ: 20(ಎ)(ಬಿ) ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ 10 ವರ್ಷ ಕಠಿಣ ಶಿಕ್ಷೆ ಹಾಗೂ 1 ಲಕ್ಷ ರೂ ದಂಡ ವಿಧಿಸಿ ಸೆ.14ರಂದು ತೀರ್ಪು ನೀಡಿದ್ದಾರೆ.

ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಎಂ.ಬಿ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.

# ಮಹಿಳಾ ಪೌರಕಾರ್ಮಿಕರಿಗಾಗಿ ವಿವಿಧ ಸ್ಪರ್ಧೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯಲ್ಲಿ ಪೌರಕಾರ್ಮಿಕರ ದಿನಾಚರಣೆ ಹಾಗೂ ಸ್ವಚ್ಛತಾ ಲೀಗ್ ಅಭಿಯಾನದ ನಿಮಿತ್ತ ಮಹಿಳಾ ಪೌರ ಕಾರ್ಮಿಕರ ಸ್ಪರ್ಧೆಗಳು ಶುಕ್ರವಾರ ಯಶಸ್ವಿಯಾಗಿ ಜರುಗಿದವು.

ಮಹಿಳಾ ಸ್ವಚ್ಛತಾ ಕಾರ್ಮಿಕರಿಗೆ ವೈಯಕ್ತಿಕ ಆಟಗಳಾದ ಲಿಂಬು ಟಿ ಸ್ಪೂನ್ ಸ್ಪರ್ಧೆ, ಓಟದ ಸ್ಪರ್ಧೆ, ಹಗ್ಗ-ಜಗ್ಗಾಟ ಸ್ಪರ್ಧೆಗಳು ನಡೆದವು. ಈ ಸಂದರ್ಭದಲ್ಲಿ ಪರಿಸರ ಅಭಿಯಂತರರಾದ ಆನಂದ ಬದಿ, ಆರೋಗ್ಯ ನಿರೀಕ್ಷಕರಾದ ಎಂ.ಎಂ ಮಕಾನದಾರ, ಕಚೇರಿ ವ್ಯವಸ್ಥಾಪಕರಾದ ಪಿ.ಎಫ್ ಶೇರಖಾನೆ, ದಫೇದಾರ್‌ಗಳಾದ ಹೇಮೇಶ ಯಟ್ಟಿ, ಕೆಂಚಪ್ಪ ಪೂಜಾರ, ಸಣ್ಣಪ್ಪ ಬೋಳಮ್ಮನವರ, ಚಂದ್ರು ಹಾದಿಮನಿ, ಸಣ್ಣಪ್ಪ ಬೋಳಮ್ಮನವರ, ನಾಗೇಶ ಬಳ್ಳಾರಿ, ಪರಶುರಾಮ ಪೂಜಾರ, ಹನಮಂತ ದೊಡ್ಡಮನಿ, ಪಂಚಾಕ್ಷರಿ ದೊಡ್ಡಮನಿ, ವಾಸು ಹಾದಿಮನಿ, ಅರವಿಂದ ಕುರ್ತಕೋಟಿ, ಸಣ್ಣರಾಮಪ್ಪ ಬಳ್ಳಾರಿ, ವೆಂಕಟೇಶ ಬಳ್ಳಾರಿ, ಸೇರಿದಂತೆ ನಗರಸಭೆಯ ಮಹಿಳಾ ಪೌರಕಾರ್ಮಿಕರು, ಗಂಟಿ ಗಾಡಿ, ತಳ್ಳು ಗಾಡಿಯ ಮಹಿಳೆಯರು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

# ಸೇತುವೆ ನಿರ್ಮಾಣ ಕಾಮಗಾರಿ ಪರಿಶೀಲನೆ



**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಸಂಸದ ಕರಡಿ ಸಂಗಣ್ಣ ಅವರು ಕೊಪ್ಪಳ ಸಿಟಿ ಸಂಚಾರ ನಡೆಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲಿದರು.

ಕೊಪ್ಪಳ ನಗರದಲ್ಲಿರುವ ಸ್ವಾಮಿ ವಿವೇಕಾನಂದ ಶಾಲೆಯ ಹತ್ತಿರದ ರೈಲ್ವೆ ಗೇಟ್ ನಂ.63 ಸ್ಥಳಕ್ಕೆ ಹಾಗೂ ಕೆ.ಇ.ಬಿ ಹತ್ತಿರದ ರೈಲ್ವೆ ಗೇಟ್ ನಂಬರ್ 65ಕ್ಕೆ ಭೇಟಿ ನೀಡಿ ಅಲ್ಲಿನ ಕಾಮಗಾರಿಯ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದರು.

ರೈಲ್ವೆ ಗೇಟ್ ನಂ.63ರಲ್ಲಿ ತ್ವರಿತಗತಿಯಲ್ಲಿ ಕೆಳ ಸೇತುವ ಕಾಮಗಾರಿಯನ್ನು ಪ್ರಾರಂಭಿಸಲು ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳಿಗೆ ಸೂಚಿಸಿದರು. ರೈಲ್ವೆ ಗೇಟ್.ನಂ.65ರಲ್ಲಿ ಕೆಳಸೇತುವೆ ನಿರ್ಮಾಣ ಮಾಡಲು ಬೇಕಾಗಿರುವ ಭೂಸ್ವಾಧೀನಕ್ಕೆ ಈಗಾಗಲೇ ಹಣ ಮಂಜೂರಾಗಿದ್ದು, ತ್ವರಿತಗತಿಯಲ್ಲಿ ಭೂಸ್ವಾಧೀನ ಮಾಡಿ ಜಾಗೆಯನ್ನು ನೇರವಾಗಿ ಖರೀದಿಸಿ ರೈಲ್ವೆ ಇಲಾಖೆಗೆ ಹಸ್ತಾಂತರಿಸುವಂತೆ ಕೊಪ್ಪಳ ತಹಸೀಲ್ದಾರರಾದ ವಿಠ್ಠಲ್ ಚೌಗಲಾ ಅವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ವಾರ್ಡ್ ನಂ.26ರ ನಗರಸಭೆ ಸದಸ್ಯರಾದ ದೇವರ ಕಂದಾಗಿ, ಬಸವರಾಜ ಬನ್ನಿಕೊಪ್ಪ, ಭಾಗ್ಯನಗರ ಪಟ್ಟಣ ಪಂಚಾಯಿತಿ ಸದಸ್ಯರಾದ ಜಗದೀಶ ಮಾಲಗಿತ್ತಿ, ನೀಲಕಂಠಯ್ಯ ಹಿರೇಮಠ, ಗ್ರಾಮಲೆಕ್ಕಾಧಿಕಾರಿ ಆಸೀಫ್, ಕೊಪ್ಪಳ ರೈಲ್ವೆ ಅಧಿಕಾರಿಗಳು ಮತ್ತು ಸಾರ್ವಜನಿಕರು ಹಾಜರಿದ್ದರು.



ಲಕ್ಷ್ಮೇಶ್ವರದ ತಾಯಿ ಪಾರ್ವತಿ ಮಕ್ಕಳ ಬಳಗದ ಸಭಾ ಭವನದಲ್ಲಿ ಶ್ರಾವಣ ಮಾಸದ ಅಂಗವಾಗಿ ಒಂದು ತಿಂಗಳ ಪರ್ಯಂತರವಾಗಿ ನಡೆದ 'ಸಿದ್ಧಾರೂಢರ ಪುರಾಣ ಮಂಗಲೋತ್ಸವ' ಸಮಾರಂಭದಲ್ಲಿ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಫಕ್ಕೀರೇಶ ಚಕಾರದ, ಇಂದುಮತಿ ಜಕ್ಕನಗೌಡ್ರ, ಸ್ವಾತಿ ಪೈ ಹಾಗೂ ಪುರಾಣ ಪ್ರವಚನಕಾರರಾದ ಪ್ರಭುಗೌಡ ಎಕ್ಕಿಕೊಪ್ಪ ಅವರನ್ನು ಸನ್ಮಾನಿಸಲಾಯಿತು.

ಸಾಪ್ತಾಹಿಕ ವಚನ ಶ್ರಾವಣ ಮಂಗಲೋತ್ಸವದಲ್ಲಿ ಶಿವನಗೌಡ ಗೌಡರ ಅಭಿಮತ

# ನಮ್ಮನ್ನು ನಾವು ಅರಿತರಷ್ಟೇ ನೆಮ್ಮದಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಇಂದು ನಾವು ಬೇರೆಯವರ ದೋಷಗಳನ್ನು ತಿದ್ದಲು ಪ್ರಯತ್ನಿಸುತ್ತೇವೆ. ಮತ್ತೊಬ್ಬರ ಬಗ್ಗೆ ಬೇಡಾದುದೆಲ್ಲವನ್ನು ವಿಚಾರಿಸುತ್ತೇವೆ. ದೋಷಾರೋಪಣೆ ಮಾಡುತ್ತೇವೆ. ಇವನ್ನೆಲ್ಲ ಬಿಟ್ಟು ನಮ್ಮ ತನು, ಮನಗಳನ್ನು ಶಾಂತವಾಗಿರಿಸಿಕೊಂಡು ನೆರೆಹೊರೆಯವರ ದುಃಖಕ್ಕೆ ಸಮಾಧಾನ ಹೇಳದೆ, ಸಹಾಯ ಮಾಡಬೇಕು, ನನ್ನಂತೆ ಇತರರು, ನನಗೆ ಬೇಕಾದುದು ಇನ್ನಿತರರಿಗೂ ಬೇಕಾಗುವುದು ಎಂಬುದನ್ನು ಅರ್ಥೈಸಿಕೊಂಡರೆ ನಮ್ಮ ಗುರಿ ಉದ್ದೇಶಗಳ ಅರಿವು ನಮಗಾಗುವದು ಎಂದು ಹಿರಿಯ ಸಾಹಿತಿ ಶಿವನಗೌಡ ಗೌಡರ ತಿಳಿಸಿದರು.

ಎಸ್‌ವಾಯ್‌ಬಿಎಂಎಸ್ ಯೋಗಪಾಠಶಾಲೆಯ ಬಸವ ಯೋಗ ಕೇಂದ್ರ ಮತ್ತು ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಸಿದ್ಧಲಿಂಗ ನಗರ ಗದಗ ಇವರುಗಳ ಸಹಯೋಗದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಸಿದ್ಧಲಿಂಗನಗರದಲ್ಲಿನ ಬಸವ ಯೋಗ ಮಂದಿರದಲ್ಲಿ ನಡೆದ ಸಾಪ್ತಾಹಿಕ ವಚನ ಶ್ರಾವಣದ ಮಂಗಲೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ ನಿವೃತ್ತ ಇಂಜಿನಿಯರ್ ವಿ.ಹೆಚ್ ಪಾಟೀಲ ಮಾತನಾಡಿ, ನಾವು ಆಧುನಿಕತೆಯ ತಾತ್ಪರ್ಯಗಳನ್ನು ಬಿಟ್ಟು ತಾತ್ಪೂರ್ತಿಕ ಸುಖ ನೀಡುವ ಸನ್ನಿವೇಶಗಳಿಗೆ ಹೆಚ್ಚು ಗಮನ ಕೊಡಬಾರದು. ನೋಡಿದ್ದನ್ನು, ಕೇಳಿದ್ದನ್ನು ಪರಾಮರ್ಶಿಸಿ ಆಚರಿಸಿದರೆ, ಆದರ್ಶ ವ್ಯಕ್ತಿಗಳಾಗಿ ಬೆಳೆಯಲು ಸಾಧ್ಯ ಎಂದರು.

> ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಿಜಿಎಂ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಪ್ರಾಧ್ಯಾಪಕಿ ಡಾ. ಮಮತಾ ಬೆಳವಡಿ ಮಾತನಾಡಿ, ವಚನಗಳ ತತ್ವಾಚರಣೆಗಳನ್ನು ನಿತ್ಯ ಜೀವನದಲ್ಲಿ ಪರಿಪಾಲಿಸಿದರೆ ಹೆಚ್ಚಿನ ಫಲ, ಪ್ರಯೋಜನಗಳು ದೊರೆಯುತ್ತವೆ. ಶರಣೆ ಆಯ್ದಕ್ಕಿ ಲಕ್ಕಮ್ಮ ತಿಳಿಸಿದಂತೆ ಈಸಕ್ಕಿಯ ಆಶೆ ನಮಗೇಕೆ? ಎಂಬ ಭಾವ ನಮ್ಮೆಲ್ಲರಲ್ಲಿ ಬೆಳೆದರೆ, ದುಡಿಯದೆ ಗಳಿಸುವ ಪ್ರವೃತ್ತಿ ಇಲ್ಲದಾಗುವದೆಂದು ಹೇಳಿದರು.

ಕಾರ್ಯಕ್ರಮ ಕುರಿತು ಜಿ.ಪಿ ಕಟ್ಟಿಮನಿ, ಬಸವರಾಜ ತೋಟಗೇರ, ರಾಜೇಶ್ವರಿ ಭಾಂಡಗೆ ಅನಿಸಿಕೆ ತಿಳಿಸಿದರು. ಜಯಶ್ರೀ ಡಾವಣಗೇರಿ, ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಿದ ಸೇವಾಕರ್ತರನ್ನು ಮತ್ತು ದೇಣಿಗೆ ನೀಡಿದ ಮಹನಿಯರನ್ನು ಗೌರವಿಸಲಾಯಿತು.

ಯೋಗ ಕೇಂದ್ರದ ಪ್ರಾಚಾರ್ಯ ಕೆ.ಎಸ್ ಪಲ್ಲೇದ ಮಾತನಾಡಿದರು. ಯೋಗ ಮಹಾವಿದ್ಯಾಲಯ ಕಟ್ಟಡ ನಿರ್ಮಾಣಕ್ಕೆ 50 ಸಾವಿರ ರೂ. ವಾಗ್ದಾನ ಮಾಡಿದ ಅರುಣಾ ಇಂಗಳಳ್ಳಿ ಇವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಹಿರಿಯರಾದ ಡಾ. ಎಸ್.ಕೆ ನಾತ್ವಾಡಮಠ ದಂಪತಿಗಳು, ಪಾರ್ವತಿ ಭೂಮಾ ಇದ್ದರು. ಲಲಿತಾ ಅಣ್ಣಿಗೇರಿ ಸಾಮೂಹಿಕ ಬಸವ ಪ್ರಾರ್ಥನೆ ಹೇಳಿದರು. ಸುಲೋಚನಾ ಐಹೊಳ್ಳಿ ಸ್ವಾಗತಿಸಿದರು. ಶಾಂತಾ ಮುಂದಿನಮನಿ ಕಾರ್ಯಕ್ರಮ ನಿರೂಪಿಸಿದರು. ವಿ.ಎಂ ಮುಂದಿನಮನಿ ವಂದಿಸಿದರು. ಡಾ. ಎಂ.ವಿ ಐಹೊಳ್ಳಿ ಮತ್ತು ವಿಜಯಾ ಚನ್ನಶೆಟ್ಟಿ ಇವರು ಮಹಾಪ್ರಸಾದ ವಿತರಣಾ ಸೇವೆ ಸಲ್ಲಿಸಿದರು.

ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಸಾಮೂಹಿಕ ವಿವಾಹ ಸಮಾರಂಭ

# ಸಾಮೂಹಿಕ ವಿವಾಹಗಳು ಬಡವರಿಗೆ ವರದಾನ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಾಮೂಹಿಕ ಮದುವೆ ಎಂದರೆ ಇದು ಬಡವರ ಮದುವೆಯಲ್ಲ, ಭಾಗ್ಯವಂತರ ಮದುವೆ. ವೀರಭದ್ರೇಶ್ವರ ಜಾತ್ರೆಯ ನಿಮಿತ್ತ ಹಮ್ಮಿಕೊಂಡ ಸಾಮೂಹಿಕ ವಿವಾಹ ಕಾರ್ಯ ಶ್ಲಾಘನೀಯ ಎಂದು ಹಿರೇಮಠದ ಮಲ್ಲಿಕಾರ್ಜುನ ಶೀವಾಚಾರ್ಯ ಸ್ವಾಮೀಜಿ ಹೇಳಿದರು.

ಸ್ಥಳೀಯ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಜರುಗಿದ ಸಾಮೂಹಿಕ ವಿವಾಹ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಸ್ವಾರ್ಥಪರ ಚಿಂತನೆಗಳನ್ನು ಕೈಬಿಟ್ಟು, ಪರೋಪಕಾರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು. ಕೇವಲ ನಾವು, ನಮ್ಮ ಕುಟುಂಬ ಅಷ್ಟೆ ಚೆನ್ನಾಗಿದ್ದರೆ ಸಾಲದು. ನಮ್ಮ ಸುತ್ತಲಿನವರೂ ಸಂತೋಷವಾಗಿ ಇರಬೇಕು. ಅಂದಾಗ ಮಾತ್ರ ನಾವು ಸಂತೋಷದಿಂದ ಇರಲು ಸಾಧ್ಯ. ದ್ವೇಷ, ಅಸೂಯೆಗಳನ್ನು ಮಾಡದೇ ಎಲ್ಲರನ್ನೂ ಪ್ರೀತಿಯಿಂದ ಕಾಣುವ ಗುಣಗಳನ್ನು ಬೆಳೆಸಿಕೊಳ್ಳಬೇಕು. ಅವುಗಳನ್ನು ಮಕ್ಕಳಿಗೂ ಬಾಲ್ಯದಿಂದಲೇ ಕಲಿಸುವ ಕಾರ್ಯವಾಗಬೇಕು. ಸಾಮೂಹಿಕ ವಿವಾಹಗಳು ಬಡವರಿಗೆ ವರದಾನವಾಗಿದೆ. ಜಾತ್ರಾ ಮಹೋತ್ಸವದ ಮಂಡಳಿಯವರು ಇನ್ನೂ ಹೆಚ್ಚೆಚ್ಚು ಸಾಮೂಹಿಕ ವಿವಾಹಗಳನ್ನು ಹಮ್ಮಿಕೊಳ್ಳಬೇಕು. ಇದರಿಂದಾಗಿ ಬಡವರ ಕಲ್ಯಾಣಕ್ಕೆ ಶ್ರಮಿಸಿದಂತಾಗುತ್ತದೆ ಎಂದರು.

ಈ ವೇಳೆ ನವ ವಧು-ವರರಿಗೆ ಶ್ರೀಗಳು ಆಶೀರ್ವದಿಸಿದರು. ದರಗಾದ ಹಜರತ್ ಮಂಜೂರ ಹುಸೇನ್ ಶ್ಯಾವಲಿ ಶರಣರು, ಶಿವಪ್ಪ ಕೋರಿ, ಬಸಪ್ಪ ಲಕ್ಕನಗೌಡ್ರ, ಮಲ್ಲಿಕಾರ್ಜುನ ಜುಟ್ಲ, ಬಾಳಪ್ಪ ಕಳಕಣ್ಣವರ, ಶಿವಪ್ಪ ಧರ್ಮಾಯತ, ಶರಣಪ್ಪ ಸೊಮಗೊಂಡ, ಶರಣಪ್ಪ ಗಂಗರಗೊಂಡ, ಶೇಖಪ್ಪ ಲಕ್ಕನಗೌಡ್ರ, ಆನಂದ ಕಳಕಣ್ಣವರ, ಕಳಕಪ್ಪ ಹತ್ತಿಕಟಗಿ, ಸುನೀಲ ಅಂಬೇಕರ, ಪ್ರಕಾಶ ಪಿಡಗೊಂಡ, ಬಸವರಾಜ ಗಂಗರಗೊಂಡ, ಜಗದೀಶ ಹೊನವಾಡ, ಶರಣಯ್ಯ ಸಂಶಿಮಠ, ಶರಣಪ್ಪ ಮಳ್ಳಿ, ಗ್ವಾಲಪ್ಪ ಮಳ್ಳಿ, ಶಿವಪ್ಪ ಲಕ್ಕನಗೌಡ್ರ, ಶೇಖರಗೌಡ ಪಾಟೀಲ, ಶಶಿಧರ ಓದುಸುಮಠ, ನಿಂಗಪ್ಪ ಲಕ್ಕನಗೌಡ್ರ, ವೀರೇಶ ಪಿಡಗೊಂಡ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು, ಜಾತ್ರಾ ಮಂಡಳಿ ಸದಸ್ಯರಿದ್ದರು.

> ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಸ್ವಾಮೀಜಿ ಮಾತನಾಡಿ, ಬರದಿಂದ ಕಷ್ಟದ ಬದುಕು ಸಾಗಿಸುವಾಗ ಸರ್ವಧರ್ಮ ಸಾಮೂಹಿಕ ವಿವಾಹ ಬಡವರ ಪಾಲಿಗೆ ಸಂಜೀವಿನಿಯಾಗಿದೆ. ಏಕತೆ ಮತ್ತು ಸಾಮರಸ್ಯದಿಂದ ಬಾಳುವಲ್ಲಿ ಸಾಮೂಹಿಕ ವಿವಾಹ ಸಹಕಾರಿಯಾಗಲಿವೆ ಎಂದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka